# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ಸಂಪಾದಕರು : ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ದಾವಣಗೆರೆ ಸೋಮವಾರ, ಫೆಬ್ರವರಿ 21, 2022

ಸಂಪುಟ : 48 ಸಂಚಿಕೆ : 282 ☎ 254736 91642 99999 RNI No: 27369/75 KA/SK/CTA-275/2021-2023. O/P @ B.V. Nagar P.O. ಪುಟ : 4 ರೂ : 4.00 www.janathavani.com janathavani@mac.com




ತುಂಗಭದ್ರಾ ನದಿ ತಟದಲ್ಲಿ 108 ಯೋಗ ಮಂಟಪಗಳ ನಿರ್ಮಾಣಕ್ಕೆ ಭಾನುವಾರ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಭೂಮಿ ಪೂಜೆ ನೆರವೇರಿಸಿದರು.

# ಪ್ರವಾಸಿ ತಾಣವಾಗಿ ಹರಿಹರ ಅಭಿವೃದ್ಧಿ

## ಹರಿಹರ ತುಂಗಭದ್ರಾ ನದಿ ತಟದಲ್ಲಿ 108 ಯೋಗ ಮಂಟಪಗಳ ನಿರ್ಮಾಣಕ್ಕೆ ಭೂಮಿ ಪೂಜೆ ನೆರವೇರಿಸಿದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ

**ಎಂ.ಚಿದಾನಂದ ಕಂಚಿಕೇರಿ**

ಹರಿಹರ, ಫೆ.20- ಹರಿಹರ ನಗರವು ಶಕ್ತಿ, ಭಕ್ತಿ ಮತ್ತು ಶ್ರದ್ಧೆಯ ಕೇಂದ್ರವಾಗಿದ್ದು, ಶ್ರೀ ಹರಿಹರೇಶ್ವರ ಸ್ವಾಮಿಯ ಗೌರವಕ್ಕೆ ಪಾತ್ರವಾಗುವ ರೀತಿಯಲ್ಲಿ ಇಲ್ಲಿನ ಪ್ರದೇಶವನ್ನು ಸುಂದರ ಪ್ರವಾಸಿ ತಾಣವನ್ನಾಗಿ ಅಭಿವೃದ್ಧಿ ಪಡಿಸಲಾಗುತ್ತದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ಇಲ್ಲಿನ ತುಂಗಭದ್ರಾ ನದಿಯ ತಟದಲ್ಲಿ 108 ಯೋಗ ಮಂಟಪಗಳ ನಿರ್ಮಾಣಕ್ಕೆ ಭೂಮಿ ಪೂಜೆ ನೆರವೇರಿಸಿ, ನಂತರ ವೇದಿಕೆ ಸಮಾರಂಭ ಉದ್ಘಾಟಿಸಿ ಅವರು ಮಾತನಾಡಿದರು.

ತುಂಗಭದ್ರಾ ನದಿಯ ತಟದಲ್ಲಿ ಪಂಚಮಸಾಲಿ ಜಗದ್ಗುರು ಶ್ರೀ ವಚನಾನಂದ ಸ್ವಾಮೀಜಿ ಅವರು ಇಲ್ಲಿನ ನಾಗರಿಕತೆ, ಸಂಸ್ಕೃತಿ ಮಹತ್ವ ಹೆಚ್ಚಿಸುವ ನಿಟ್ಟಿನಲ್ಲಿ ತುಂಗಾರತಿ ಕಾರ್ಯಕ್ರಮ ನಡೆಸಲು ಉದ್ದೇಶಿಸಿರುವುದು ಶ್ಲಾಘನೀಯ ಎಂದರು.

ಪಂಚಭೂತದಲ್ಲಿ ಮುಖ್ಯವಾಗಿರುವುದು ಜಲ. ಅದರ ಸಂರಕ್ಷಣೆ, ಶುದ್ಧೀಕರಣ ಮಹತ್ವದ್ದು. ಪ್ರತಿ ನದಿಯೂ ತನ್ನದೇ ಆದ ಸಂಸ್ಕೃತಿ ಹೊಂದಿದೆ. ಅದನ್ನು ಉಳಿಸುವ ಜೊತೆಗೆ ಸುತ್ತಮುತ್ತಲಿನ ಪ್ರದೇಶಗಳ ಅಭಿವೃದ್ಧಿಗೆ ಆದ್ಯತೆ ನೀಡಲಾಗುತ್ತದೆ ಎಂದು ಹೇಳಿದರು.

ನಾಗರಿಕತೆ-ಸಂಸ್ಕೃತಿ ಎರಡೂ ಜೊತೆ ಜೊತೆಯಲ್ಲಿ ಬೆಳೆಯಬೇಕು. ಅನೇಕರಿಗೆ ನಾಗರಿಕತೆ ಮತ್ತು ಸಂಸ್ಕೃತಿ ನಡುವೆ ಇರುವ ವ್ಯತ್ಯಾಸಗಳ ಅರಿವಿಲ್ಲ ಎಂದರು.



ಕಾಲ ಬದಲಾದಂತೆ ಚಕ್ಕಡಿ ಬದಲಾಗಿ ಟ್ರ್ಯಾಕ್ಟರ್ ಬಂದಿದೆ. ಬಿಸೇಕಲ್ಲಿನ ಬದಲಾಗಿ ಮಿಕ್ಸಿ ಬಂದಿದೆ. ಹಿಂದಿನ ದಿನಗಳಲ್ಲಿ ಬೀಸುವ ಕಲ್ಲಿನ ಜೊತೆ ಹಾಡು ಹೇಳುತ್ತಾ ತವರು ಮನೆಯವರನ್ನು ನೆನೆ ಯುತ್ತಾ ಸಂಸ್ಕೃತಿ ಉಳಿಸಿಕೊಂಡು ಹೋಗುತ್ತಿದ್ದರು. ಮಾನವೀಯತೆ, ಪರೋಪಕಾರಿ, ಉದಾರತೆ ಗುಣಗಳು ಇಂದಿನ ದಿನಗಳಲ್ಲಿ ಕಡಿಮೆಯಾಗಿವೆ. ಇದನ್ನು ಉಳಿಸಿ, ಬೆಳೆಸಬೇಕಾಗಿದೆ ಎಂದರು.

ಇತ್ತೀಚಿನ ದಿನಗಳಲ್ಲಿ ಪ್ರಧಾನಿ ನರೇಂದ್ರ ಮೋದಿಯವರು ಕಾಶಿ ವಿಶ್ವನಾಥ ದೇವಸ್ಥಾನದ ಅಭಿವೃದ್ಧಿಗೆ ಆದ್ಯತೆ ನೀಡಿದ್ದರು. ಎಲ್ಲಾ ಘಾಟ್‌ಗಳನ್ನು ಸ್ವಚ್ಛತೆ ಮಾಡಿ ಆರತಿ ಕಾರ್ಯವನ್ನು ಸ್ವಚ್ಛಂದವಾಗಿ ಮಾಡುವಂತೆ ಮಾಡಿದ್ದಾರೆ. ಅದೇ ರೀತಿ ದಕ್ಷಿಣ ಭಾರತದ ತುಂಗಾರತಿ ವೈಭವದ ಸಂಸ್ಕೃತಿ ವೃದ್ಧಿಯಾಗಬೇಕು ಎಂದು ಹೇಳಿದರು.

ಹರಿ ಮತ್ತು ಹರ ಎರಡೂ ತನ್ನದೇ ಆದ ಶಕ್ತಿ ಹೊಂದಿದ್ದು, ಎರಡೂ ಶಕ್ತಿಗಳ ಸಂಗಮ ಅದ್ಭುತವಾಗಿವೆ. ಪಂಚಮಸಾಲಿ ಶ್ರೀಗಳ ಮಾರ್ಗದರ್ಶನದಲ್ಲಿ ಇಲ್ಲಿನ ಸ್ಥಳದಲ್ಲಿ 108 ಮಂಟಪದ ನಿರ್ಮಾಣ, ವಾಕಿಂಗ್ ಪಾತ್, ಸೇರಿದಂತೆ, ಈ ನಗರವನ್ನು ಸುಂದರ ಪ್ರವಾಸಿ ತಾಣವಾಗಿ ಮಾಡುವ ಮೂಲಕ ಹಲವಾರು ಕೆಲಸಕ್ಕೆ ಆದ್ಯತೆ ನೀಡಲಾಗುತ್ತದೆ ಎಂದು ಹೇಳಿದರು.

ಹರಿಹರ ತಾಲ್ಲೂಕಿನ ಅಭಿವೃದ್ಧಿಗೆ ಪಿಡಬ್ಲ್ಯೂಡಿ ಇಲಾಖೆ ವತಿಯಿಂದ 40 ಕಿಲೋ ಮೀಟರ್ ರಸ್ತೆ ನಿರ್ಮಾಣ, ರಾಜ್ಯ ರಸ್ತೆ ಅಭಿವೃದ್ಧಿ ನಿಗಮದಿಂದ 22 ಕೋಟಿ ರೂಪಾಯಿ ಅನುದಾನದಲ್ಲಿ 59 ಕಿ.ಮೀ. ಗ್ರಾಮೀಣ ರಸ್ತೆ ಅಭಿವೃದ್ಧಿ, ಪೊಲೀಸ್ ಪಬ್ಲಿಕ್ ಶಾಲೆ, ಕರ್ನಾಟಕ ಪಬ್ಲಿಕ್ ಶಾಲೆ, ನಗರ ಅಭಿವೃದ್ಧಿಗೆ 40 ಕೋಟಿ ರೂ.ಬಿಡುಗಡೆ ಮಾಡಲಾಗಿದೆ.

ಈ ಭಾಗದ ಮಾಜಿ ಶಾಸಕ ಹರೀಶ್ ಮತ್ತು ಶಾಸಕ ಎಸ್.ರಾಮಪ್ಪ ಅವರ ಬಹುದಿನಗಳ ಬೇಡಿಕೆಯಾದ ಭೈರನಪಾದ ಯೋಜನೆಗೆ ಮುಂದಿನ ದಿನಗಳಲ್ಲಿ ಆದ್ಯತೆ ನೀಡಲಾಗುತ್ತದೆ. ಇಲ್ಲಿನ ಕೈಗಾರಿಕಾ ವೈಭವವನ್ನು ಮರುಕಳಿಸುವ ನಿಟ್ಟಿನಲ್ಲಿ ಕೈಗಾರಿಕಾ ಸಚಿವ ಮುರುಗೇಶ್ ನಿರಾಣಿಯವರಿಗೆ ಕೈಗಾರಿಕಾ ಕಾರಿಡಾರ್ ಮಾಡಲು ತಿಳಿಸುವುದಾಗಿಯೂ ದಾವಣಗೆರೆ, ಹರಿಹರ, ರಾಣೇಬೆನ್ನೂರು ಕ್ಷೇತ್ರದ ಅಭಿವೃದ್ಧಿ ಜೊತೆಗೆ ಒಟ್ಟಾರೆ ಸಮಗ್ರ ಕರ್ನಾಟಕದ ಅಭಿವೃದ್ಧಿಗೆ ಆದ್ಯತೆ ನೀಡಲಾಗುವುದು ಎಂದು ಹೇಳಿದರು.

ಪಂಚಮಸಾಲಿ ಗುರುಪೀಠಾಧ್ಯಕ್ಷ ಶ್ರೀ ವಚನಾನಂದ ಸ್ವಾಮೀಜಿ ಮಾತನಾಡಿ, ತುಂಗಾ ತಟದಲ್ಲಿ ತುಂಗಾರತಿ (2ನೇ ಪುಟಕ್ಕೆ)

# ರಾಗಿ ಖರೀದಿ ನಿರ್ಬಂಧ ತೆರವಿಗಾಗಿ ಪ್ರಧಾನಿಗೆ ಪತ್ರ ಬರೆದ ಸಿದ್ದರಾಮಯ್ಯ

ಬೆಂಗಳೂರು, ಫೆ.20- ರಾಗಿ ಖರೀದಿ ಮೇಲಿನ ನಿರ್ಬಂಧ ತೆರವುಗೊಳಿಸಿ ಎಂದು ಮನವಿ ಮಾಡಿ, ಮಾಜಿ ಮುಖ್ಯಮಂತ್ರಿ ಸಿದ್ಧರಾಮಯ್ಯ ಅವರು ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರಿಗೆ ಪತ್ರ ಬರೆದಿದ್ದಾರೆ.

ಈ ವರ್ಷ ನಿರಂತರವಾಗಿ ಸುರಿದ ಮಳೆಯಿಂದಾಗಿ 4.5 ಲಕ್ಷ ಟನ್ ರಾಗಿ ಮಳೆಯ ಪಾಲಾದರೂ 15 ಲಕ್ಷ ಟನ್ ರಾಗಿ ರೈತರ ಕೈಯ್ಯಲ್ಲಿದೆ. ಹಾಗಾಗಿ ರೈತರು ಬೆಂಬಲ ಬೆಲೆಯಡಿ ರಾಗಿಯನ್ನು ಮಾರಾಟ ಮಾಡಲು ಉತ್ಸಾಹ ತೋರಿಸುತ್ತಿದ್ದಾರೆ ಎಂದು ಅವರು ವಿವರಿಸಿದ್ದಾರೆ.

ಇಡೀ ವರ್ಷ ಪದೇ ಪದೇ ಸುರಿದ ಮಳೆಯ ನಡುವೆಯೂ ರಾಗಿ, ಭತ್ತ ಮುಂತಾದ ಬೆಳೆಗಳನ್ನು ಕೊಯ್ಲು ಮಾಡಿ ಮಾರುಕಟ್ಟೆಗೆ ತರುತ್ತಿದ್ದಾರೆ. ಸರ್ಕಾರವು ಈ ವರ್ಷ ಜನವರಿ 1 ರಿಂದ ರಾಗಿಯನ್ನು ಬೆಂಬಲ ಬೆಲೆ ಯೋಜನೆಯಡಿ ಖರೀದಿಸಲು ನೋಂದಣಿ ಪ್ರಕ್ರಿಯೆಯನ್ನು ಪ್ರಾರಂಭಿಸಿದೆ. ದಕ್ಷಿಣ ಕರ್ನಾಟಕದ ಬೆಂಗಳೂರು ಗ್ರಾಮಾಂತರ, ರಾಮನಗರ, ಕೋಲಾರ, ಚಿಕ್ಕಬಳ್ಳಾಪುರ, ಮಂಡ್ಯ, (2ನೇ ಪುಟಕ್ಕೆ)

# ರಾಣಿ ಎಲಿಜಬೆತ್‌ಗೆ ಕೊರೊನಾ ಸೋಂಕು

ಲಂಡನ್, ಫೆ.20- ರಾಣಿ ಎಲಿಜಬೆತ್ (95) ಅವರಿಗೆ ಕೊರೊನಾ ವೈರಸ್ ಸೋಂಕು ತಗುಲಿದೆ ಎಂದು ಬಕಿಂಗ್‌ಹ್ಯಾಮ್‌ನ ಅರಮನೆ ತಿಳಿಸಿದೆ.

ಶೀತವನ್ನೂ ಒಳಗೊಂಡಂತೆ ಅವರಿಗೆ ಕೋವಿಡ್‌ನ ಸೌಮ್ಯ ರೋಗಲಕ್ಷಣಗಳಿವೆ. ಈ ವಾರ ಅವರು ತಮ್ಮ ವಿಂಡ್ಸರ್ ಕ್ಯಾಸಲ್ ನಿವಾಸದಲ್ಲಿ ಅಲ್ಪ ಪ್ರಮಾಣದಲ್ಲಿ ಕರ್ತವ್ಯಗಳನ್ನು ಮುಂದುವರೆಸುವ ನಿರೀಕ್ಷೆಯಿದೆ. ವೈದ್ಯಕೀಯ ಆರೈಕೆ ಪಡೆಯುತ್ತಿರುವ ರಾಣಿ, ಕೋವಿಡ್‌ನ ಎಲ್ಲಾ ಮಾರ್ಗಸೂಚಿಗಳನ್ನು ಅನುಸರಿಸಲಿದ್ದಾರೆ ಎಂದು ಅರಮನೆ ಹೇಳಿದೆ. ರಾಣಿ ಎಲಿಜಬೆತ್ ಅವರ ಹಿರಿಯ ಮಗ ಪ್ರಿನ್ಸ್ ಚಾರ್ಲ್ಸ್ (2ನೇ ಪುಟಕ್ಕೆ)

# ರಾಜಧರ್ಮ ಮರೆತ ಬಿಜೆಪಿ: ಪ್ರಿಯಾಂಕಾ

ರಾಯ್‌ಬರೇಲಿ, ಫೆ.20- ಕೇವಲ ದೊಡ್ಡ ಉದ್ಯಮಿಗಳಿಗಾಗಿ ಮಾತ್ರ ಕೆಲಸ ಮಾಡುತ್ತಿರುವ ಬಿಜೆಪಿ ಸಾಮಾನ್ಯ ಜನರ ಸೇವೆ ಮಾಡಬೇಕೆಂಬ 'ರಾಜ ಧರ್ಮ'ವನ್ನು ಮರೆತಿದೆ ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ವಾದ್ರಾ ಟೀಕಿಸಿದ್ದಾರೆ.



ಮತಗಳನ್ನು ಪಡೆಯುವುದಕ್ಕಾಗಿ ಧರ್ಮ ಮತ್ತು ಜಾತಿಯನ್ನು ಬಳಸುವವರನ್ನು ಜನರು ಗಮನಿಸಬೇಕು ಎಂದು ರಾಯ್‌ಬರೇಲಿಯ ಜಗತ್‌ಪುರದಲ್ಲಿ ರ್‍ಯಾಲಿಯನ್ನು ಉದ್ದೇಶಿಸಿ ಅವರು ಮಾತನಾಡಿದರು.

ಬಿಜೆಪಿ ನಾಯಕರು ಜನರ ಸೇವೆ ಮಾಡುವುದು ತಮ್ಮ ಧರ್ಮ ಎಂಬುದನ್ನು ಮರೆತಿದ್ದಾರೆ. ಅವರಿಗೆ ಧರ್ಮ ಎಂಬುದು ಮತ ಗಳಿಕೆಗಾಗಿ ಜನರನ್ನು ಪ್ರಚೋದಿಸುವ ತಂತ್ರವಾಗಿಬಿಟ್ಟಿದೆ. ಬಿಜೆಪಿ ಸರ್ಕಾರವು ಜನರ ಸೇವೆ ಮಾಡಬೇಕೆಂಬ ರಾಜ ಧರ್ಮವನ್ನು ಮರೆತಿದೆ ಎಂದು ಹೇಳಿದರು.

# ದೇವರು-ಧರ್ಮ ಭಾರತೀಯರ ಜೀವಾಳ

ದಾವಣಗೆರೆ, ಫೆ.20- ಭಾರತದಲ್ಲಿ ಇರುವಷ್ಟು ದೇಗುಲಗಳು ಜಗತ್ತಿನ ಯಾವ ರಾಷ್ಟ್ರಗಳಲ್ಲೂ ಕಾಣಲು ಸಾಧ್ಯವಿಲ್ಲ. ದೇವರು ಮತ್ತು ಧರ್ಮ ಭಾರತೀಯರ ಜೀವಾಳ ಎಂದು ಶ್ರೀಶೈಲ ಜಗದ್ಗುರು ಡಾ. ಚನ್ನಸಿದ್ಧರಾಮ ಶಿವಾಚಾರ್ಯ ಮಹಾಸ್ವಾಮಿಗಳು ನುಡಿದರು.

ನಗರದ ಹೊರ ವಲಯದ ಜೆ.ಹೆಚ್. ಪಟೇಲ್ ಬಡಾವಣೆಯಲ್ಲಿ ನಿರ್ಮಿಸಿರುವ ಶ್ರೀಶೈಲ ಮಲ್ಲಿಕಾರ್ಜುನ, ಶ್ರೀ ಹೇಮರೆಡ್ಡಿ ಮಲ್ಲಮ್ಮ, ಶ್ರೀ ವೇಮನ ದೇವಸ್ಥಾನ, ಮೂರ್ತಿ ಪ್ರತಿಷ್ಠಾಪನೆ ಮತ್ತು ಕಳಸಾರೋಹಣ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ, ಶ್ರೀಗಳು ಮಾತನಾಡಿದರು.

ಸನಾತನ ಧರ್ಮವನ್ನು ಪಾಲಿಸುತ್ತಿರುವ ಭಾರತೀಯರು, ದೇವರು ಮತ್ತು ಧರ್ಮದ ಮೇಲೆ ಅತೀವ ಶ್ರದ್ಧಾ-ಭಕ್ತಿಯನ್ನು ಹೊಂದಿದ್ದಾರೆ. ಆದ್ದರಿಂದಲೇ ಭಾರತದಲ್ಲಿ ದೇವರು ಮತ್ತು ಧರ್ಮ ಪ್ರತಿಯೊಬ್ಬರ ಜೀವಾಳ ಎಂದು ಹೇಳಲಾಗುತ್ತದೆ ಎಂದರು.

ಲಿಂ. ಶ್ರೀ ವಾಗೀಶ ಪಂಡಿತಾರಾಧ್ಯ ಶಿವಾಚಾರ್ಯ ಮಹಾಸ್ವಾಮಿಗಳು ಶ್ರೀಶೈಲದಲ್ಲಿ ನಡೆಸಿದ ಜಾಗೃತಿ ಕಾರ್ಯಕ್ರಮ, ಲಿಂ. ಉಮಾಪತಿ ಪಂಡಿತಾರಾಧ್ಯ ಶಿವಾಚಾರ್ಯ ಮಹಾಸ್ವಾಮಿಗಳು ನಿರ್ಮಿಸಿದ ಹೇಮರೆಡ್ಡಿ ಮಲ್ಲಮ್ಮನವರ ಸ್ಮಾರಕ ಹಾಗೂ ಶ್ರೀಶೈಲದಲ್ಲಿನ ಕಾರ್ಯಕ್ರಮಗಳನ್ನು ಗಮನಿಸುತ್ತಾ ಬಂದ ಆಂಧ್ರ ಸರ್ಕಾರ, ಶ್ರೀಶೈಲ ಪೀಠಕ್ಕೆ 10 ಎಕರೆ ಜಾಗ ಮಂಜೂರು ಮಾಡಿದೆ. ಮೊದಲ ಹಂತದಲ್ಲಿ ನೀಡಿರುವ 5 ಎಕರೆ ಜಾಗದಲ್ಲಿ ಮೂರು ಎಕರೆ ಜಾಗದಲ್ಲಿ ಹೇಮರೆಡ್ಡಿ ಮಲ್ಲಮ್ಮ ದೇಗುಲ ನಿರ್ಮಾಣ ಮಾಡಲಾಗುವುದು ಎಂದು ಹೇಳಿದರು.



ಶ್ರೀಶೈಲ ಜಗದ್ಗುರುಗಳು

ಶ್ರೀಶೈಲ ಪೀಠವು ಮಾಡುತ್ತಾ ಬಂದಿರುವ ಹೇಮರೆಡ್ಡಿ ಮಲ್ಲಮ್ಮ ಮತ್ತು (3ನೇ ಪುಟಕ್ಕೆ)

# ದಾಖಲೆ ರಹಿತ ಜನವಸತಿ ಗ್ರಾಮಗಳನ್ನು ಕಂದಾಯ ಗ್ರಾಮಗಳನ್ನಾಗಿ ಪರಿವರ್ತಿಸಿ

## ಸರ್ಕಾರಕ್ಕೆ ಮಾಜಿ ಸಚಿವ ಶಿವಮೂರ್ತಿ ನಾಯ್ಕ ಒತ್ತಾಯ

ಹರಪನಹಳ್ಳಿ, ಫೆ.20- ರಾಜ್ಯದಲ್ಲಿರುವ ದಾಖಲೆ ರಹಿತ ಜನವಸತಿ ಗ್ರಾಮಗಳನ್ನು ಕಂದಾಯ ಗ್ರಾಮಗಳನ್ನಾಗಿ ಪರಿವರ್ತಿಸಬೇಕು ಎಂದು ಮಾಜಿ ಸಚಿವ ಶಿವಮೂರ್ತಿನಾಯ್ಕ ರಾಜ್ಯ ಸರ್ಕಾರಕ್ಕೆ ಆಗ್ರಹಿಸಿದರು.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ರಾಜ್ಯದಲ್ಲಿ ಗೊಲ್ಲಹಟ್ಟಿ, ವಡ್ಡರಹಟ್ಟಿ, ನಾಯಕರಹಟ್ಟಿ, ಕುರುಬರಹಟ್ಟಿ, ಲಂಬಾಣಿ ತಾಂಡಾ, ಹಾಡಿ, ದೊಡ್ಡಿ, ಕಾಲೋನಿ, ಪಾಳ್ಯ ಇತ್ಯಾದಿ 58 ಸಾವಿರ ದಾಖಲೆ ರಹಿತ ಜನವಸತಿ ಪ್ರದೇಶಗಳಿವೆ ಎಂದು ಹೇಳಿದರು.

ಕರ್ನಾಟಕ ಭೂ ಸುಧಾರಣಾ ತಿದ್ದುಪಡಿ ಮಸೂದೆಯನ್ನು 2017 ರಲ್ಲಿ ವಿಧಾನಸಭೆಯಲ್ಲಿ ಒಪ್ಪಿಗೆ ಮತ್ತು ರಾಷ್ಟ್ರಪತಿ ಅಂಕಿತ ಸಹ ಆಗಿದೆ. ಆದರೆ ರಾಜ್ಯ ಸರ್ಕಾರ ಅನುಷ್ಠಾನಗೊಳಿಸಿಲ್ಲ ಎಂದು ದೂರಿದರು.

ದಾಖಲೆ ಇಲ್ಲದ ಕಾರಣಕ್ಕಾಗಿ ಆ ಪ್ರದೇಶದ ಜನರ ಜಾಗಗಳಿಗೆ ಹಕ್ಕುಪತ್ರ, ಸಾಲ- ಸೌಲಭ್ಯ ಇತರೆ ಸೌಕರ್ಯ ಸಿಗುವುದಿಲ್ಲ ಎಂದು ಅವರು ಹೇಳಿದರು.

ಸ್ವಯಂ ಪ್ರಕರಣ ದಾಖಲಿಸಿಕೊಂಡು, ಇಂತಹ ಪ್ರದೇಶಗಳನ್ನು ಕಂದಾಯ ಗ್ರಾಮಗಳಾಗಿ ಪರಿವರ್ತಿಸಲು ಸುಪ್ರಿಂಕೋರ್ಟ್ ರಾಜ್ಯ ಸರ್ಕಾರಕ್ಕೆ ಸೂಚನೆ ನೀಡಬೇಕು. ಈ ಕುರಿತು ಲೋಕಸಭಾ ಸಭಾಪತಿ ಗಳಿಗೂ ಮನವಿ ಮಾಡಿದ್ದೇನೆ ಎಂದು ಅವರು ಹೇಳಿದರು.

ಹಟ್ಟಿ, ತಾಂಡಾಗಳು ಕಂದಾಯ ಗ್ರಾಮ ಆಗದೇ ಹೋದರೆ 2ನೇ ದರ್ಜೆ ಪ್ರಜೆಗಳಾಗಿ ಇರಬೇಕಾಗುತ್ತದೆ. ನಾವುಗಳು ರಾಜ್ಯದಲ್ಲಿ 1ನೇ ದರ್ಜೆ ಪ್ರಜೆಗಳಾಗಿ ಕಾರ್ಯನಿರ್ವಹಿಸಬೇಕಾದರೆ, ಸೌಲಭ್ಯದಿಂದ ವಂಚಿತವಾಗಿರುವ ಗ್ರಾಮಗಳನ್ನು ಕಂದಾಯ ಗ್ರಾಮಗಳನ್ನಾಗಿ ಪರಿವರ್ತಿಸಿದಾಗ ಮಾತ್ರ (2ನೇ ಪುಟಕ್ಕೆ)

# ಅಧ್ಯಾತ್ಮಿಕ ಜ್ಞಾನದಿಂದ ಮಾತ್ರ ಪರಿವರ್ತನೆ ಸಾಧ್ಯ

## ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವವಿದ್ಯಾಲಯದ ರಾಷ್ಟ್ರೀಯ ಧಾರ್ಮಿಕ ವಿಭಾಗದ ಸಂಪರ್ಕಾಧಿಕಾರಿ ರಾಜಯೋಗಿ ಬ್ರಹ್ಮಾಕುಮಾರ ರಾಮನಾಥ್ ಜೀ ಪ್ರತಿಪಾದನೆ




ದಾವಣಗೆರೆ, ಫೆ.20- ಅಧ್ಯಾತ್ಮಿಕ ಜ್ಞಾನದಿಂದಾಗಿ ಮಾತ್ರ ಪರಿವರ್ತನೆ ಸಾಧ್ಯ ಎಂದು ಅಬು ಪರ್ವತದ ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವವಿದ್ಯಾಲಯದ ರಾಷ್ಟ್ರೀಯ ಧಾರ್ಮಿಕ ವಿಭಾಗದ ಸಂಪರ್ಕಾಧಿಕಾರಿ ರಾಜಯೋಗಿ ಬ್ರಹ್ಮಾಕುಮಾರ ರಾಮನಾಥ್ ಜೀ ಹೇಳಿದರು.

ಅಂತರರಾಷ್ಟ್ರೀಯ ಲಯನ್ಸ್ ಸೇವಾ ಸಂಸ್ಥೆ ಜಿಲ್ಲೆ 317 ಸಿ, ಪ್ರಾಂತ್ಯ-9ರ ವತಿಯಿಂದ ನಗರದ ದೇವರಾಜ ಅರಸು ಬಡಾವಣೆಯಲ್ಲಿನ ಲಯನ್ಸ್ ಭವನದಲ್ಲಿ ಭಾನುವಾರ ಹಮ್ಮಿಕೊಳ್ಳಲಾಗಿದ್ದ ಪ್ರಾಂತೀಯ ಸಮ್ಮೇಳನ-ಪರಿವರ್ತನೆ 2021-22ರ ಕಾರ್ಯಕ್ರಮ ದಲ್ಲಿ ಅವರು ವಿಶೇಷ ಉಪನ್ಯಾಸ ನೀಡಿದರು.

**ಲಯನ್ಸ್ ಪ್ರಾಂತೀಯ ಸಮ್ಮೇಳನ-ಪರಿವರ್ತನೆ ಕಾರ್ಯಕ್ರಮ**

ಸ್ವ ಪರಿವರ್ತನೆಯಿಂದ ವಿಶ್ವ ಪರಿವರ್ತನೆ ಸಾಧ್ಯ. ಪರಿವರ್ತನೆ ಹೊಂದಲು ಎಲ್ಲರಿಗೂ ಸ್ವತಂತ್ರವಿದೆ. ಆದರೆ, ಸಮಾಜದಲ್ಲಿ ನಾನು ಅಂದುಕೊಂಡಂತೆಯೇ ನಡೆಯಬೇಕು ಎಂಬ ಮನೋಭಾವ ಜನರಲ್ಲಿ ಹೆಚ್ಚಿದೆ. ವೈದ್ಯರ ಸಲಹೆಯಂತೆ ಔಷಧ ಪಡೆಯದೆ ಹೇಗೆ ಕಾಯಿಲೆಯನ್ನು ಪರಿಣಾಮಕಾರಿಯಾಗಿ ಗುಣಪಡಿಸಲು ಸಾಧ್ಯವಿಲ್ಲವೋ ಹಾಗೆಯೇ ಅಧ್ಯಾತ್ಮಿಕ ಜ್ಞಾನವಿಲ್ಲದೇ ನಮ್ಮ ಜೀವನದಲ್ಲಿ ಪರಿವರ್ತನೆ ಸಾಧ್ಯವಿಲ್ಲ ಎಂದು ಪ್ರತಿಪಾದಿಸಿದರು.

ನಾವು ಮಾಡುವ ಪ್ರತಿಯೊಂದು ಕೆಲಸಗಳನ್ನು ಪರಿಪೂರ್ಣತೆಯಿಂದ ಮಾಡಿದಾಗ ಯಶಸ್ಸು ಗಳಿಸಲು ಸಾಧ್ಯ. ಆದರೆ ಇಂದು ನಾವು ಮಾಡುತ್ತಿರುವ ಕೆಲಸ, ಕಾರ್ಯಗಳಲ್ಲಿ ಏಕಾಗ್ರತೆ ಇಲ್ಲವಾಗಿದೆ. ಆದ್ದರಿಂದಲೇ ಅಶಾಂತಿ, ಅಸಮಾಧಾನಗಳು ಹೆಚ್ಚಾಗುತ್ತಿವೆ. ನಮ್ಮ ಕೆಲಸ ಅಥವಾ ವಿದ್ಯಾಭ್ಯಾಸದಲ್ಲಿ ಕುಶಲತೆ, ಪರಿಪೂರ್ಣತೆ ಇದ್ದಾಗ ಯಶಸು ಹಿಂಬಾಲಿಸುತ್ತದೆ ಎಂದರು.

ಕರ್ಮದಲ್ಲಿ ಯಶಸ್ಸು ಪಡೆಯಲು ಧ್ಯಾನ ಸೂಕ್ತ ವಿಧಾನ. ಮನಸ್ಸು ಹಾಗೂ ಬುದ್ಧಿ ಪರಸ್ಪರ ವಿರುದ್ಧ ದಿಕ್ಕಿನಲ್ಲಿ ಸಾಗುತ್ತವೆ. ಅವುಗಳನ್ನು ಜಾಗೃತಗೊಳಿಸಿ ಒಂದುಗೂಡಿಸುವುದೇ ಏಕಾಗ್ರತೆ. ನಿತ್ಯವೂ ನಮ್ಮೊಂದಿಗೆ ನಾವು ಮಾತನಾಡುವುದರಿಂದ ಇದು (2ನೇ ಪುಟಕ್ಕೆ)

# ಸಂಸದರ ಪುತ್ರ ಅನಿತ್ ವಿಧಾನಸಭೆಗೆ ಸ್ಪರ್ಧೆ..?

**ಬಿ.ಪಿ.ಸುಭಾನ್**

ದಾವಣಗೆರೆ ಸಂಸದ ಜಿ.ಎಂ.ಸಿದ್ದೇಶ್ವರ ಅವರ ಪುತ್ರ, ಬಿಜೆಪಿ ಯುವ ಮುಖಂಡ, ವಾಣಿಜ್ಯೋದ್ಯಮಿ ಜಿ.ಎಸ್.ಅನಿತ್ ಬರುವ ವಿಧಾನಸಭೆ ಚುನಾವಣೆಗೆ ಧುಮುಕಲು ಸಜ್ಜಾಗಿರುವ ಬಗ್ಗೆ ಸುದ್ದಿಗಳು ಹರಿದಾಡುತ್ತಿವೆ.

ಜಿ.ಎಸ್.ಅನಿತ್ ಚಿತ್ರದುರ್ಗ ಅಥವಾ ದಾವಣಗೆರೆ ಜಿಲ್ಲೆಯ ಯಾವುದಾದರೊಂದು ಕ್ಷೇತ್ರದಲ್ಲಿ ಸ್ಪರ್ಧಿಸುವ ಬಗ್ಗೆ ಸಿದ್ಧತೆಗಳು ನಡೆದಿವೆ ಎಂದು ಪಕ್ಷದ ಕಾರ್ಯಕರ್ತರಲ್ಲಿ ಚರ್ಚೆಗಳು ನಡೆಯುತ್ತಿವೆ.

ಈಗಾಗಲೇ ಚಿತ್ರದುರ್ಗ ಜಿಲ್ಲೆಯ ಹೊಳಲ್ಕೆರೆ ವಿಧಾಸಭಾ ಕ್ಷೇತ್ರದ ಉಸ್ತುವಾರಿಯಾಗಿ ಪಕ್ಷದಲ್ಲಿ ಸಕ್ರಿಯರಾಗಿದ್ದಾರೆ.



ಸತತ ಮೂರು ಬಾರಿ ದಾವಣಗೆರೆ ಲೋಕಸಭಾ ಕ್ಷೇತ್ರದ ಸಂಸದರಾಗಿ ಜನಪ್ರಿಯರಾಗಿರುವ ಜಿ.ಎಂ. ಸಿದ್ದೇಶ್ವರ ರಾಜಕೀಯ ಕ್ಷೇತ್ರದಲ್ಲಿ ತಮ್ಮ ಉತ್ತರಾಧಿಕಾರಿಯನ್ನಾಗಿ ಅನಿತ್‌ಗೆ ಪಟ್ಟಕಟ್ಟುವ ಸಂಭವವಿದೆ.

ಜಗಳೂರಿನಲ್ಲಿ ಈಚೆಗೆ ಬಹಿರಂಗ ಸಭೆಯಲ್ಲಿ ಶಾಸಕ ರಾಮಚಂದ್ರ, ಬಿಜೆಪಿ ಯುವ (2ನೇ ಪುಟಕ್ಕೆ)

# ರಾಜಕಾರಣಿಗಳು ಸ್ವಾರ್ಥಕ್ಕಾಗಿ ಸಮಾಜದ ಸ್ವಾಸ್ಥ್ಯ ಕದಡಬಾರದು



ಹೊನ್ನಾಳಿ, ಫೆ.20- ಪ್ರತಿಯೊಬ್ಬ ನಾಗರಿಕನು, ನಾನು ಭಾರತೀಯ ಎಂಬ ಮನೋಭಾವನೆಯನ್ನು ಮೂಡಿಸಿಕೊಳ್ಳಬೇಕು. ಪ್ರಾದೇಶಿಕ ಅಸಮತೋಲನ ನಿವಾರಣೆಯಾಗಬೇಕು. ರಾಜಕಾರಣಿಗಳು ತಮ್ಮ ಸ್ವಾರ್ಥಕ್ಕಾಗಿ ಸಮಾಜದ ಸ್ವಾಸ್ಥ್ಯ ಕದಡಬಾರದು. ಮತದಾರರು ಜಾಗೃತರಾಗಬೇಕು ಎಂದು ಉಜ್ಜಯಿನಿ ಸದ್ಧರ್ಮ ಪೀಠದ ಶ್ರೀ ಸಿದ್ದಲಿಂಗರಾಜ ದೇಶಿಕೇಂದ್ರ ಶಿವಾಚಾರ್ಯ ಭಗವತ್ಪಾದರು ಹೇಳಿದರು.

ಹೊನ್ನಾಳಿ ತಾಲ್ಲೂಕು ಹೊಟ್ಯಾಪುರ ಗ್ರಾಮದ ಉಜ್ಜಯಿನಿ ಶಾಖಾ ಹಿರೇಮಠದ ನೂತನ ಶಿಲಾ ಮಠದ ಶಂಕುಸ್ಥಾಪನೆ ಕಾರ್ಯಕ್ರಮ ನೆರವೇರಿಸಿ ಧರ್ಮಸಭೆಯಲ್ಲಿ (2ನೇ ಪುಟಕ್ಕೆ)


# ಯಮ್ಮಿ ಕಲಾವತಿ ನಿಧನ



ದಾವಣಗೆರೆ ನಗರದ ಪಿ ಜೆ ಬಡಾವಣೆ ವಾಸಿ
ಯಮ್ಮಿ ಸತೀಶ್ ರವರ ಧರ್ಮಪತ್ನಿ
**ಶ್ರೀಮತಿ ಕಲಾವತಿ** (58)
ಇವರು ದಿನಾಂಕ 20-2-22ರ ಭಾನುವಾರ ರಾತ್ರಿ 8:30 ಕ್ಕೆ
ಹೃದಯಾಘಾತದಿಂದ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ.
ಪತಿ, ಓರ್ವ ಪುತ್ರ, ಓರ್ವ ಪುತ್ರಿ, ಸೊಸೆ
ಹಾಗೂ ಅಪಾರ ಬಂಧು-ಬಳಗವನ್ನು ಆಗಲಿದ್ದಾರೆ. ಇವರ ಅಂತ್ಯ
ಸಂಸ್ಕಾರವನ್ನು ದಿನಾಂಕ 21.2.22ರ ಸೋಮವಾರ ಮಧ್ಯಾಹ್ನ 1-30 ಕ್ಕೆ
ನಗರದ ವೀರಶೈವ ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.

**ದುಃಖತಪ್ತ ಕುಟುಂಬ ವರ್ಗ ಹಾಗೂ ಯಮ್ಮಿ ವಂಶಸ್ಥರು**

**ಮಾರಾಟಕ್ಕೆ/ಖರೀದಿಗೆ ವಿಚಾರಿಸಿರಿ**
ಬಸವೇಶ್ವರ ಲೇಔಟ್ 40 ಅಡಿ ರಸ್ತೆ, ಪೂರ್ವಕ್ಕೆ 30x50 ಸೈಟ್, 30x40 ಉತ್ತರ 30x40 3 ಸೈಟ್ ಪೂರ್ವಕ್ಕೆ
**ಸುರೇಶ್ 95911 60520**

**ಅಕ್ವಶೈನ್ RO ವಾಟರ್ ಪ್ಯೂರಿಫೈಯರ್**
ನಮ್ಮಲ್ಲಿ ಎಲ್ಲಾ ಕಂಪನಿಯ ವಾಟರ್ ಪ್ಯೂರಿಫೈಯರ್ ಸೇಲ್ಸ್ ಮತ್ತು ಸರ್ವೀಸ್ ಮಾಡಲಾಗುತ್ತದೆ. ಹೋಲ್‌ಸೇಲ್ ದರದಲ್ಲಿ ಎಲ್ಲಾ ಬಿಡಿಭಾಗಗಳು ಲಭ್ಯವಿರುತ್ತವೆ.
**ಫೋ. : 99807 27767**

**ಸಿಂಗಲ್ ಬೆಡ್‌ರೂಂ ಮನೆ ಬಾಡಿಗೆಗೆ**
ದಾವಣಗೆರೆ ನಿಜಲಿಂಗಪ್ಪ ಬಡಾವಣೆ 2ನೇ ಮೇನ್, 12ನೇ ಅಡ್ಡರಸ್ತೆಯಲ್ಲಿ 'ಸಿ' ಅಡ್ಡ ರಸ್ತೆ 'ಬಿ' ಬ್ಲಾಕ್ (#472) ರಲ್ಲಿ ಪೂರ್ವ ದಿಕ್ಕಿನ ಸಿಂಗಲ್ ಬೆಡ್‌ರೂಮ್ ಮನೆ ಬಾಡಿಗೆಗೆ ಇದೆ.
**97412 51737**

**ಪ್ರವಾಸ**
ದಾವಣಗೆರೆಯಿಂದ ಎರಡು ದಿನಗಳ ಗೋವಾ ಪ್ರವಾಸ ದಿ:25.02.2022 ರಿಂದ, ದೋನಪಾಲ್, ಮೀರಾ ಅಮರ್, ಮಾಂಡವಿ ರಿವರ್ ಕ್ರೂಜ್, ಕಲ್ಲಂಗೋಟ್, ಮಂಗೇಶ್ ಟೆಂಪಲ್. ಗೀತಾ ಟ್ರಾವೆಲ್ಸ್ ಮಹಿಳಾ ಸಮಾಜ ಕಾಂಪ್ಲೆಕ್ಸ್ ಅಶೋಕ ರೋಡ್, ದಾವಣಗೆರೆ.
**99455 34966, 94481 62499**

**ಜೀವನ ಪರ್ಯಂತ ಪೆನ್ಷನ್**
LIC, IPO, ಖರೀದಿ ಮಾಹಿತಿ ಮ್ಯುಚ್ಯುವಲ್ ಫಂಡ್ ಪಾಲಿಸಿ, ಮಕ್ಕಳ ಮದುವೆ, ವಿದ್ಯಾಭ್ಯಾಸ, ಗೃಹ ನಿರ್ಮಾಣ, ಹಳೆಯ ಪಾಲಿಸಿಗಳ ಹಾಗು ವಾಹನಗಳ ವಿಮೆಯ ಮಾಹಿತಿಗಾಗಿ
**86602 35013**

**ಬೇಕಾಗಿದ್ದಾರೆ**
ಬಟ್ಟೆ ಅಂಗಡಿಯಲ್ಲಿ ಕೆಲಸ ಮಾಡಲು ಪುರುಷ ಮತ್ತು ಮಹಿಳಾ ಅಭ್ಯರ್ಥಿಗಳು ಬೇಕಾಗಿದ್ದಾರೆ. ಗ್ರಾಮಾಂತರ ಪ್ರದೇಶದ ಪುರುಷ ಅಭ್ಯರ್ಥಿಗಳಿಗೆ ಊಟ, ವಸತಿ ಸೌಲಭ್ಯವಿದೆ.
ಸಂಪರ್ಕಿಸಿ : **98442-94446**

**ತುರ್ತಾಗಿ ಬೇಕಾಗಿದ್ದಾರೆ**
ಪರ್ವ ಮಿಲೆಟ್ ಹೆಲ್ತ್ ಮಿಕ್ಸ್ ಸೆಂಟರ್ ಎಂಬ ಕಂಪನಿಗೆ ದಾವಣಗೆರೆ ಹಾಗೂ ಹಾವೇರಿ ಜಿಲ್ಲೆ, ಸಿಟಿ, ತಾಲ್ಲೂಕಿನಾದ್ಯಂತ ಡಿಸ್ಟ್ರಿಬ್ಯೂಟರ್ ಬೇಕಾಗಿದ್ದಾರೆ.
**84314 81240**

**ಬೇಕಾಗಿದ್ದಾರೆ**
ಮೆಡ್ ಕ್ಯೂರ್‌ನಲ್ಲಿ ಕೆಲಸ ಮಾಡಲು ಅನುಭವವುಳ್ಳ ಹುಡುಗ ಮತ್ತು ಹುಡುಗಿಯರು ಬೇಕಾಗಿದ್ದಾರೆ.
Address : ಜಯನಗರ SSI HOSPITAL Road, Davanagere
**78999 91860**

**ಬೇಕಾಗಿದ್ದಾರೆ**
1. ದಾವಣಗೆರೆಯಲ್ಲಿ ಮನೆ ಮತ್ತು ಹೊರಗಿನ ಕೆಲಸ ಮಾಡಲು ಬೇಕಾಗಿದ್ದಾರೆ. (ದ್ವಿಚಕ್ರ ವಾಹನ ಹೊಂದಿರಬೇಕು)
2. ಹೊಲದಲ್ಲಿ ಇದ್ದುಕೊಂಡೇ ಕೆಲಸ ಮಾಡಲು ಓರ್ವ ಆಳು ಬೇಕಾಗಿದ್ದಾರೆ.
**70185 88900**
**95388 70257**

**ಬೇಕಾಗಿದ್ದಾರೆ**
1. ದಾವಣಗೆರೆಯಲ್ಲಿ ಮನೆ ಮತ್ತು ಹೊರಗಿನ ಕೆಲಸ ಮಾಡಲು ಬೇಕಾಗಿದ್ದಾರೆ. (ದ್ವಿಚಕ್ರ ವಾಹನ ಹೊಂದಿರಬೇಕು)
2. ಹೊಲದಲ್ಲಿ ಇದ್ದುಕೊಂಡೇ ಕೆಲಸ ಮಾಡಲು ಓರ್ವ ಆಳು ಬೇಕಾಗಿದ್ದಾರೆ.
**70185 88900**
**95388 70257**

**ಮನೆ ಬಾಡಿಗೆಗಿವೆ**
ಶಾಮನೂರು ಪಕ್ಕ ಡಾಲರ್ಸ್ ಕಾಲೋನಿಯಲ್ಲಿ ಶಿವ ಸದನ ತಿಮ್ಮಾರೆಡ್ಡಿ ಹೈಸ್ಕೂಲ್ ಹತ್ತಿರ 1BHK, 2BHK ಮನೆ ಬಾಡಿಗೆಗೆ ಇವೆ. ಲಿಫ್ಟ್ ವ್ಯವಸ್ಥೆ ಇದೆ. ಸಂಪರ್ಕಿಸಿ
**87623 12789**
**99722 44667**

**ತಕ್ಷಣ ಬೇಕಾಗಿದ್ದಾರೆ**
SS ಆಸ್ಪತ್ರೆ, ಬಾಪೂಜಿ ಆಸ್ಪತ್ರೆ ಹಾಗೂ ದಾವಣಗೆರೆ ಸುತ್ತಮುತ್ತಲು 8 ಗಂಟೆ ಹಾಗೂ 12 ಗಂಟೆ ಕೆಲಸ ಮಾಡಲು ಲೇಡಿಸ್/ಜೆಂಟ್ಸ್ ಸೆಕ್ಯೂರಿಟಿ ಗಾರ್ಡ್ಸ್ ತಕ್ಷಣ ಬೇಕಾಗಿದ್ದಾರೆ. ESI-PF ಸೌಲಭ್ಯ ಇರುತ್ತದೆ.
**ಅಸೋಸಿಯೇಟೆಡ್ ಎಂಟರ್ ಪ್ರೈಸಸ್**, ದಾವಣಗೆರೆ.
7019948769, 9739089022, 90605 45500

**ತಕ್ಷಣ ಬೇಕಾಗಿದ್ದಾರೆ**
ಸೆಕ್ಯೂರಿಟಿ ಗಾರ್ಡ್ ಮತ್ತು ಹೌಸ್ ಕೀಪಿಂಗ್ ಕೆಲಸ ಮಾಡಲು ಬೇಕಾಗಿದ್ದಾರೆ.
**ಪಾಪುಲರ್ ಸೆಕ್ಯೂರಿಟಿ & ಅಲೈಡ್ ಸರ್ವೀಸ್ಸ್**
#01, ಮೊದಲನೇ ಮಹಡಿ, RMC ಲಿಂಕ್ ರೋಡ್, ಈರುಳ್ಳಿ ಮಾರ್ಕೆಟ್ ಎದುರು, ದಾವಣಗೆರೆ.
**90362 37886**

**ತೋಟ ಮಾರಾಟಕ್ಕಿದೆ**
ದಾವಣಗೆರೆಯಿಂದ 17 ಕಿ.ಮೀ. ದೂರ ಶಿಂಗ್ರಿಹಳ್ಳಿ-ಹಳ್ಳಿಕೇರಿ ನಡುವೆ ಅಪೂಸ್ ಮಾವಿನತೋಟ 4 ಎಕರೆ, ತೆಂಗು ಮತ್ತು ಅಡಿಕೆ 3 ಎಕರೆ, 2 ಬೋರ್‌ವೆಲ್ ಡ್ರಿಪ್, ತಂತಿ ಬೇಲಿ ರಸ್ತೆ ಇರುವ ತೋಟ ಮಾರಾಟಕ್ಕಿದೆ. ಸಂಪರ್ಕಿಸಿ:
**98809 33630**

**ಉತ್ತಮ ಗುಣಮಟ್ಟದ ಅಡಿಕೆ ಗೋಟು ಮತ್ತು ಅಡಿಕೆ ಮೊಳಕೆ ಬೀಜಗಳು ದೊರೆಯುತ್ತವೆ**
5 ಕೆಜಿ ಪ್ಯಾಕೆಟ್ ಸಸಿಗಳು ಲಭ್ಯ
ದರ - 100 ರಿಂದ 150 ರೂಪಾಯಿ
ಸ್ಥಳ : ಹೆಚ್. ಕಲಪನಹಳ್ಳಿ.
**99456 43545, 99015 58855**

**ಸೈಟುಗಳು ಮಾರಾಟಕ್ಕಿವೆ**
ದಾವಣಗೆರೆ ವಿದ್ಯಾನಗರ ಲಾಸ್ಟ್ ಬಸ್ ಸ್ಟಾಪ್, 20 ನೇ ಕ್ರಾಸ್, ಸೈಟ್ ನಂ. 23, 24 ಸಂಪರ್ಕಿಸಿರಿ
**99727 00163**

**ಮನೆ ಮಾರಾಟಕ್ಕಿದೆ**
20x60 ಅಳತೆಯಲ್ಲಿ ಎಂಸಿಸಿ ಬಿ ಬ್ಲಾಕ್‌ನಲ್ಲಿ ಮನೆ ಮಾರಾಟಕ್ಕಿದೆ. ಸಂಪರ್ಕಿಸಿ :
**94496 84768**
ಮಧ್ಯವರ್ತಿಗಳಿಗೆ ಅವಕಾಶವಿಲ್ಲ

**ಮನೆ ಬಾಡಿಗೆಗೆ ಇದೆ**
2BHK ಮೊದಲನೆ ಮಹಡಿ, ಬೋರ್‌ವೆಲ್ & ಕಾರ್ಪೊರೇಷನ್ ನೀರಿನ ವ್ಯವಸ್ಥೆಯಿರುವ ಮನೆ ದೇವರಾಜ ಅರಸ್ ಬಡಾವಣೆ 'ಬಿ' ಬ್ಲಾಕ್ 1ನೇ ಮುಖ್ಯರಸ್ತೆ, 11ನೇ ಕ್ರಾಸ್ ನಂ 353 'ಸಿರಿಸಾರ' ಉತ್ತರ ದಿಕ್ಕಿಗೆ ಬಾಗಿಲಿರುವ ಮನೆ ಬಾಡಿಗೆಗೆ ದೊರೆಯುತ್ತದೆ. ವಿಚಾರಿಸಿ
**94489 63300**

**ಹುಡುಗರು ಬೇಕಾಗಿದ್ದಾರೆ**
ಬ್ರ್ಯಾಂಡೆಡ್ ಬಟ್ಟೆ ಅಂಗಡಿಯಲ್ಲಿ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ.
**98867 57688**

**ತಕ್ಷಣ ಬೇಕಾಗಿದ್ದಾರೆ**
ದಾವಣಗೆರೆ ಮತ್ತು ದಾವಣಗೆರೆ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್‌ಗಳು ಹಾಗೂ ಜಗಳೂರಿನ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಕೆಲಸ ಮಾಡಲು ಗನ್ ಮ್ಯಾನ್‌ಗಳು ಬೇಕಾಗಿದ್ದಾರೆ. ಆಕರ್ಷಕ ಸಂಬಳ ಮತ್ತು ESI, PF ಸೌಲಭ್ಯವಿರುತ್ತದೆ. ಸೆಕ್ಯೂರಿಟಿ ಗಾರ್ಡ್‌ಗಳಿಗೆ Per day 400 ರೂ. ಸಂಬಳವಿರುತ್ತದೆ. ಸಂಪರ್ಕಿಸಿ
**63667 28552, 96060 50591, 86603 98210**

**ಬೇಕಾಗಿದ್ದಾರೆ**
ಸಸ್ಯಹಾರಿ ಹೋಟೆಲ್‌ಗೆ ಅಡುಗೆ ಮಾಡಲು, ಚಪಾತಿ ಮಾಡಲು ಹಾಗೂ ಸಹಾಯಕರು ತಕ್ಷಣವೇ ಬೇಕಾಗಿದ್ದಾರೆ.
**9353716855, 7899978299**

**ರೂಮ್ಸ್ ಬಾಡಿಗೆಗೆ ಇವೆ**
ದಾವಣಗೆರೆ ನಗರದ ಎಂಸಿಸಿ 'ಬಿ' ಬ್ಲಾಕ್‌ನಲ್ಲಿ ಪ್ರತ್ಯೇಕ ಅಟ್ಯಾಚ್ ಬಾತ್ ರೂಂವುಳ್ಳ ಮೂರು ರೂಂಗಳು ಬಾಡಿಗೆಗೆ ಇವೆ. (Only For Ladies) ಸಂಪರ್ಕಿಸಿ
**97427 67274, 93538 97342**

**ಸೈಟ್‌ಗಳು ಮಾರಾಟಕ್ಕಿವೆ**
ಗ್ಲಾಸ್ ಹೌಸ್ ಹತ್ತಿರ ಹಾಗು ಹಿಂಭಾಗ ಪೂರ್ವ 40x48, 50x80, 30x50, ಪಶ್ಚಿಮ 30x50, ದಕ್ಷಿಣ 30x50, ಹೊಸ ಬನಶಂಕರಿ ಬಡಾವಣೆ 30x50 ಉತ್ತರ ಪಶ್ಚಿಮ ಕಾರ್ನರ್, ಮುಂದೆ 40 ಅಡಿ ರಸ್ತೆ
**ಐಗೂರು ವಿಜಯಕುಮಾರ**
**99457 02495**

**ಮನೆಗಳು ಮಾರಾಟಕ್ಕಿವೆ**
ಶಿವ ಪಾರ್ವತಿ ಬಡಾವಣೆ ಪೂರ್ವ ಡೂಪ್ಲೆಕ್ಸ್ 30x52, ಪಶ್ಚಿಮ, 30x46, (ಕೆಳಗೆ 2BHK ಮೇಲೆ ಸಿಂಗಲ್ BHK) ಜೆ.ಹೆಚ್. ಪಟೇಲ್ ಬಡಾವಣೆ (ಯುನಿವರ್ಸಿಟಿ ಆಫೀಸ್ ಹತ್ತಿರ) ಉತ್ತರ 30x50 ಡೂಪ್ಲೆಕ್ಸ್
**ಐಗೂರು ವಿಜಯಕುಮಾರ**
**99457 02495**

**ಬೇಕಾಗಿದ್ದಾರೆ**
ಹೋಟೆಲ್ ಅಥವಾ Cafeಯಲ್ಲಿ ಕೆಲಸ ಮಾಡಲು ಯುವಕರು ಬೇಕಾಗಿದ್ದಾರೆ. ಕೆಲಸ ಮಾಡಿದ ಅನುಭವಿರಬೇಕು, ಸಂಬಳ ಹಾಗು ಪ್ರೋತ್ಸಹ ಧನ ಹಾಗೂ ವಸತಿ ಇರುತ್ತದೆ. ಸಂಪರ್ಕಿಸಿ
**70197 64596**

**ಹಳೇ ಮನೆ ಮಾರಾಟಕ್ಕಿದೆ**
ಚೌಕಿಪೇಟೆ ಹತ್ತಿರ ವಿಠ್ಠಲ ಮಂದಿರದ ಪಕ್ಕದ ರಸ್ತೆಯಲ್ಲಿ 15x42ರ ಅಳತೆಯ ಹಳೆಯ ಹೆಂಚಿನ ಮನೆ ಮಾರಾಟಕ್ಕಿದೆ.
**94838 62779**

**ತುರ್ತು ಮಾರಾಟಕ್ಕಿವೆ**
4'x6' ಒಂದು ಕಬ್ಬಿಣದ ಡಬಲ್ ಮಂಚ (14 ಜಿ), 3'x6' ಒಂದು ಕಬ್ಬಿಣದ ಸಿಂಗಲ್ ಮಂಚ (16 ಜಿ) 4'x6' ಸೋಫಾ ಕಂ ಬೆಡ್ (ಹೊಸ ಕುಷನ್ ಹಾಕಲಾಗಿದೆ) ತುರ್ತಾಗಿ ಮಾರಾಟಕ್ಕಿವೆ.
**99641 64895**

**ಮನೆ ಲೀಸ್‌ಗೆ ಇದೆ**
2 BHK ವಿತ್ ಅಟ್ಯಾಚ್ ಹಾಗೂ ಎಲ್ಲಾ ಸೌಲಭ್ಯಗಳಿರುವ Ist Floor, 30x40 ಅಳತೆಯ ಮನೆ ಲೀಸ್‌ಗೆ ಇದೆ ಹಾಗೂ 1 BHK ವಿತ್ ಅಟ್ಯಾಚ್, 2nd Floor ಮನೆ ಬಾಡಿಗೆಗೆ ಇದೆ. ಆಸಕ್ತರು ಸಂಪರ್ಕಿಸಿ: #389/G-54, S.S. ಹೈಟೆಕ್ ಆಸ್ಪತ್ರೆ ರಸ್ತೆ, ಶ್ರೀ ಸಾಯಿಬಾಬಾ ದೇವಸ್ಥಾನದ ಹಿಂಭಾಗ, ಜಯನಗರ, ದಾವಣಗೆರೆ. **ಮೊ: 98447 10844**

**ಮನೆ ಬೇಕಾಗಿದೆ**
**ಬಾಡಿಗೆಗೆ ಅಥವಾ ಲೀಸ್‌ಗೆ**
2 BHK, 3 BHK, 4 BHK or More Bedrooms ಹೊಂದಿರುವ ಮನೆ ಬಾಡಿಗೆಗೆ/ಲೀಸ್‌ಗೆ ಬೇಕಾಗಿದೆ.
ಸಂಪರ್ಕಿಸಿ:
**91489 33445**

**ಬೇಕಾಗಿದ್ದಾರೆ**
ರಾಣೇಬೆನ್ನೂರು ತಾಲ್ಲೂಕು ಹಿಲ್ಲದಹಳ್ಳಿ ಮತ್ತು ನಲ್ಲೂರಿನಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್ ಮತ್ತು ದಾವಣಗೆರೆ ಸುತ್ತ ಮುತ್ತಲು ಕೆಲಸ ಮಾಡಲು ಸೆಕ್ಯೂರಿಟಿ, ರಿಸೆಪ್ಷನಿಸ್ಟ್, ಆಯಾ, ರೂಂ ಬಾಯ್, ಆಫೀಸ್‌ನಲ್ಲಿ ಕೆಲಸ ಮಾಡಲು ಬೇಕಾಗಿದ್ದಾರೆ. ಊಟ ಮತ್ತು ವಸತಿ ವ್ಯವಸ್ಥೆಯಿರುತ್ತದೆ. ಆಕರ್ಷಕ ಸಂಬಳವಿರುತ್ತದೆ. ಸಂಪರ್ಕಿಸಿ
**74113 07071, 91085 09541, 98806 48207**

**Dull in Maths**
**Junior Abacus**
(UKG to 3rd std )
**Vedic Maths**
(4th STD to 10th std)
**Bruit Abacus & Vedic maths**
Nijalingappa badavane
**M ; 97390 66956**

**ಹೊಸಮನೆ ಮಾರಾಟಕ್ಕಿದೆ**
ದಾವಣಗೆರೆ ಎಸ್.ಎಸ್. ಲೇಔಟ್ 'ಬಿ' ಬ್ಲಾಕ್ 3ನೇ ಮೇನ್ ನಲ್ಲಿ 20x65 ಅಳತೆಯ ನೆಲಮಹಡಿ, ಮೊದಲ ಹಾಗೂ 2 ನೇ ಮಹಡಿಗಳಿರುವ ಪಶ್ಚಿಮ ದಿಕ್ಕಿನ ಹೊಸಮನೆ ಮಾರಾಟಕ್ಕಿದೆ. ಆಸಕ್ತರು ಸಂಪರ್ಕಿಸಿ
**92428-86869**

**ಮನೆ ಬೇಕಾಗಿದೆ**
**ಬಾಡಿಗೆಗೆ ಅಥವಾ ಲೀಸ್‌ಗೆ**
4 BHK, 5 BHK, 6 BHK Bedroom House ಬೇಕಾಗಿದೆ.
ಸಂಪರ್ಕಿಸಿ:
**63616 81919**

**WANTED**
Ex-Servicemen, Field Officer Experiance Accoutant Male / Female From Retired Accounts Dept, Supervisor on urgent Basis
SREE SERVICES, DVG
**86603 98210 / 96060 50592**

**ಮಿಯಾಖಾನ್**
**ಎಲ್ಲ ಸಮಸ್ಯೆಗಳಿಗೆ 101% ಗ್ಯಾರಂಟಿ ಪರಿಹಾರ.**
ವಶೀಕರಣ ಸ್ಪೆಷಲಿಸ್ಟ್ , ನಿಮ್ಮ ಸಮಸ್ಯೆಗಳಾದ ಆಸ್ತಿ-ಪಾಸ್ತಿ, ಕೋರ್ಟ್ - ಕಚೇರಿ, ಗರ್ಭಿಣಿ ತೊಂದರೆ, ವಿದೇಶ ಪ್ರವಾಸ, ಹಣಕಾಸಿನ ತೊಂದರೆ, ಮಾಟ-ಮಂತ್ರ, ಸತಿ-ಪತಿ ಕಲಹ, ಮನೆಯಲ್ಲಿ ಅಶಾಂತಿ, ಕೆಲಸ ಮತ್ತು ವ್ಯವಹಾರದಲ್ಲಿ ತೊಂದರೆ, ಪ್ರೇಮವಿಚಾರ ಇನ್ನೂ ಮುಂತಾದ ನಿಮ್ಮ ಎಲ್ಲಾ ಸಮಸ್ಯೆಗಳಿಗೆ ಒಮ್ಮೆ ಭೇಟಿ ನೀಡಿ ತಕ್ಷಣ ಪರಿಹರಿಸಿಕೊಳ್ಳಿ, ದಾವಣಗೆರೆ
**ಮೊ : 81339 33804**


**ಸೈಟ್‌ಗಳು ಮಾರಾಟಕ್ಕಿವೆ**
ದಾವಣಗೆರೆ ರಾಮನಗರ, ಎಸ್.ಎಸ್. ಆಸ್ಪತ್ರೆ ಹಿಂಭಾಗದಲ್ಲಿ ಸುಲಭ ಕಂತುಗಳಲ್ಲಿ ಸೈಟುಗಳು ಮಾರಾಟಕ್ಕಿವೆ. (Rs 1,450/-Sqft)
**ಹುಲ್ಲುಮನೆ ಪ್ರಾಪರ್ಟೀಸ್ & ಪವರ್ ಲಿಮಿಟೆಡ್**
**95135 03000**
**97392 15000**

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿ ಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

**WANTED**
BILLING/STORE SALES
BOLAS THE FACTORY OUTLET
DRY FRUIT SHOP
FOR LADIES ONLY
QUALIFICATION : ANY DEGREE WITH COMPUTER KNOWLEDGE
**9900708999 / 9448454709**

**ಹೊಸಮನೆ ಮಾರಾಟಕ್ಕಿದೆ**
30x50 ರಲ್ಲಿ ಸ್ವಂತಕ್ಕೆ ಕಟ್ಟಿಕೊಂಡಿರುವ ಡೂಪ್ಲೆಕ್ಸ್ ಮನೆ ಶಾಮನೂರಿನ ಯುರೋ ಕಿಡ್ಸ್ ಸ್ಕೂಲ್‌ನ ಹತ್ತಿರ
ಸಂಪರ್ಕಿಸಿ
**73492 00928**

**ನಿವೃತ್ತ ಮುಖ್ಯ ಶಿಕ್ಷಕ ಅಲ್ ಹಾಜ್ ಮೊಹಮ್ಮದ್ ಹನೀಫ್ ಸಾಹೇಬ್ ನಿಧನ**



ಹರಿಹರದ ಹೈಸ್ಕೂಲ್ ಬಡಾವಣೆ 1ನೇ ಮೇನ್ 4ನೇ ಕ್ರಾಸ್ ವಾಸಿ, ನಿವೃತ್ತ ಮುಖ್ಯ ಶಿಕ್ಷಕ ಅಲ್ ಹಾಜ್ ಜನಾಬ್ ಬಿ.ಜೆ. ಮೊಹಮ್ಮದ್ ಹನೀಫ್ ಸಾಹೇಬ್ (99) ಇವರು ದಿನಾಂಕ 20.2.2022ರ ಭಾನುವಾರ ರಾತ್ರಿ 9 ಗಂಟೆಗೆ ನಿಧನರಾದರು. ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 21.02.2022ರ ಸೋಮವಾರ ಮಧ್ಯಾಹ್ನ 1.45 ಕ್ಕೆ ಹರಿಹರದ ಖಬರಸ್ತಾನದಲ್ಲಿ ನೆರವೇರಿಸಲಾಗುವುದು

**JOBS**
Sales Manager/Executives
Any Degree (English, Computer Knowledge)
Office Job/Marketing/ Field Work, Male/Female
Freshers/Experienced
**98444 92888**

**WANTED**
Boys and Girls required for sales executive job at Food Mart Supermarket
**Quli: PUC Any degree**
**Mob : 98864 63531**

**ನೇರ ಪರೀಕ್ಷೆಗಳು**
**ಉನ್ನತ ಶಿಕ್ಷಣಕ್ಕೆ ಮತ್ತು ಸರ್ಕಾರಿ ಕೆಲಸಕ್ಕೆ ಉಪಯೋಗ.**
SSLC, PUC, Technical & Non Technical, Pharmacy & BHMS (Government & Private College)
**ಕೆಲವೇ ಸೀಟುಗಳು ಲಭ್ಯ**
**ಶ್ರೀ ಸಾಯಿ ಕರೆಸ್ಪಾಂಡೆನ್ಸ್ ಕಾಲೇಜ್**
ರಾಂ ಅಂಡ್ ಕೋ ಸರ್ಕಲ್, ಗಣೇಶ ದೇವಸ್ಥಾನದ ಹಿಂಭಾಗ, ಸೋಮು ಮೆಡಿಕಲ್ಸ್ ಮೇಲೆ, ದಾವಣಗೆರೆ.
**87490 24789, 82173 02649**

**PG / HOSTEL**
**Building ಬಾಡಿಗೆಗೆ**
15 Rooms with attached Bathrooms + Kitchen & Dining Hall.
Address : 6th Cross, BIET College Road, Near Bapuji High School, Davanagere.
**99725 35329, 85531 84854**

# ಇಂದು ಆರೋಗ್ಯ ಕಾರ್ಡ್ ವಿತರಣೆ

ಕರ್ನಾಟಕ ಸರ್ಕಾರ ಆರಂಭಿಸಿರುವ ಗ್ರಾಮ ಒನ್ ಕೇಂದ್ರದ ವತಿಯಿಂದ ಇಂದಿನಿಂದ ಮೂರು ದಿನಗಳ ಕಾಲ ಮಹಾನಗರ ಪಾಲಿಕೆ ಆವರಣದಲ್ಲಿ ಆರೋಗ್ಯ ಕಾರ್ಡ್ (ಎಬಿ-ಎಆರ್‌ಕೆ)ಗಳನ್ನು ವಿತರಣೆ ಮಾಡಲಾಗುವುದು.

ಸಾರ್ವಜನಿಕರು ಆಧಾರ್ ಕಾರ್ಡ್ ಮತ್ತು ರೇಷನ್ ಕಾರ್ಡ್‌ನೊಂದಿಗೆ ಆಗಮಿಸಿ ಆರೋಗ್ಯ ಕಾರ್ಡ್ ಸೌಲಭ್ಯ ಪಡೆಯಬಹುದು.

# ರಾಗಿ ಖರೀದಿ : ಪತ್ರ

**(1ನೇ ಪುಟದಿಂದ)** ಮೈಸೂರು, ತುಮಕೂರು, ಹಾಸನ, ಚಿತ್ರದುರ್ಗ, ಚಿಕ್ಕಮಗಳೂರು, ಚಾಮರಾಜನಗರ, ಬೆಂಗಳೂರು ನಗರ ಜಿಲ್ಲೆಗಳಲ್ಲಿ ಪ್ರಮುಖವಾಗಿ ರಾಗಿಯನ್ನು ಬೆಳೆಯುತ್ತಾರೆ ಎಂದು ಹೇಳಿದ್ದಾರೆ.

# ಸ್ವಾರ್ಥಕ್ಕಾಗಿ ಸಮಾಜದ ಸ್ವಾಸ್ಥ್ಯ ಕದಡಬಾರದು



**(1ನೇ ಪುಟದಿಂದ)** ಮಾತನಾಡಿದರು.

ಪ್ರೀತಿ, ಸಂಸ್ಕಾರ, ಲೌಕಿಕ ಶಿಕ್ಷಣ, ಅನ್ನ ದಾಸೋಹ ಹಾಗೂ ತಮ್ಮ ತಪಸ್ಸಿನ ಶಕ್ತಿಯಿಂದ ಭಕ್ತರ ಕಷ್ಟಗಳನ್ನು ದೂರ ಮಾಡುತ್ತಿದ್ದಾರೆ. ಸನಾತನ ಧರ್ಮವನ್ನು ಜಗತ್ತಿನಲ್ಲಿ ಉಳಿಸಿ, ಬೆಳಸಿಕೊಂಡು ಹೋಗುವ ಕೆಲಸ, ಕಾರ್ಯಗಳನ್ನು ವೀರಶೈವ ಪಂಚಪೀಠಗಳಡಿಯಲ್ಲಿ ಮಠಗಳು ಮಾಡುತ್ತಿವೆ. ಹೊಟ್ಯಾಪುರ ಹಿರೇಮಠದಲ್ಲಿಯೂ ಬಡವರಿಗೆ ಶಿಕ್ಷಣ ನೀಡುವ ಕಾರ್ಯವಾಗಬೇಕು. ಮಠಗಳಿರುವುದು ಭಕ್ತರಿಗಾಗಿ. ಇಂದಿನ ಮಠಗಳ ಚಿಂತನೆಯೇ ಬೇರೆಯಾಗಿರುವುದು ವಿಷಾದದ ಸಂಗತಿ ಎಂದರು.

ಹೊನ್ನಾಳಿ ಹಿರೇಕಲ್ಮಠದ ಶ್ರೀ ಡಾ. ಚನ್ನಮಲ್ಲಿಕಾರ್ಜುನ ಶಿವಾಚಾರ್ಯ ಸ್ವಾಮಿಗಳು ಮಾತನಾಡಿ, ರಾಂಪುರದ ಲಿಂಗೈಕ್ಯ ಗುರುಗಳು ಹಾಗೂ ಹೊಟ್ಯಾಪುರದ ಶ್ರೀಗಳು ಸಹೋದರರಂತೆ ಇದ್ದರು. ಗುರುದ್ವಯರಿಬ್ಬರೂ ಪಂಚ ಪೀಠಗಳ ಬಣ್ಣದ ವಸ್ತ್ರಗಳನ್ನು ಧರಿಸುವ ಮೂಲಕ ಪಂಚತತ್ವಗಳನ್ನು ಭಕ್ತರಿಗೆ ಹಂಚಿದ್ದಾರೆ ಎಂದರು.

ಹೊಟ್ಯಾಪುರ ಹಿರೇಮಠದ ಶ್ರೀ ಗಿರಿಸಿದ್ದೇಶ್ವರ ಶಿವಾಚಾರ್ಯ ಸ್ವಾಮಿಗಳು ಮಾತನಾಡಿ, ಉತ್ತರ ಕರ್ನಾಟಕದಿಂದ ಕೊಟ್ಟೂರು, ಕಮ್ಮಾರಗಟ್ಟೆಯಿಂದ ಹೊಟ್ಯಾಪುರದಲ್ಲಿ ನೆಲೆನಿಂತ ಮಠ ನಮ್ಮದಾಗಿದೆ. ಗಿರಿಸಿದ್ದೇಶ್ವರ ಬೆಟ್ಟದಲ್ಲಿ ತಪಸ್ಸನ್ನು ಆಚರಿಸಿದ ನಮ್ಮ ವಂಶದ ಸಿದ್ದಯ್ಯ ನೆಲೆಸಿದರು. ಮೂಲ ಕರ್ತೃಗದ್ದುಗೆ ಮಠವು ಶಿಥಿಲಗೊಂಡಿದೆ. ಭಕ್ತರ ಆಶಯದಂತೆ ಶಿಲಾಮಠ ಸ್ಥಾಪಿಸುವ ಸಂಕಲ್ಪ ಕೈಗೊಂಡಿರುವುದಾಗಿ ತಿಳಿಸಿದರು.

ಸಿಎಂ ರಾಜಕೀಯ ಕಾರ್ಯದರ್ಶಿ ಎಂ.ಪಿ. ರೇಣುಕಾಚಾರ್ಯ ಮಾತನಾಡಿ, ಬಸವರಾಜ ಬೊಮ್ಮಾಯಿ ಮುಖ್ಯಮಂತ್ರಿಗಳಾದ ಬಳಿಕ ಅವಳಿ ತಾಲ್ಲೂಕಿನ ಅಭಿವೃದ್ಧಿಗೆ 100ಕ್ಕೂ ಹೆಚ್ಚು ಕೋಟಿ ಅನುದಾನವನ್ನು ತಂದಿದ್ದೇನೆ. ಶಿಲಾಮಠದ ನಿರ್ಮಾಣಕ್ಕೆ ಸರ್ಕಾರದಿಂದ 50 ಲಕ್ಷ ಅನುದಾನ ಮಂಜೂರು ಮಾಡಿಸುವುದಾಗಿ ತಿಳಿಸಿದರು.

ಶಿವಮೊಗ್ಗ ವಿಭಾಗದ ಪ್ರಭಾರಿ (ಬಿಜೆಪಿ) ಗಿರೀಶ್ ಪಾಟೀಲ್ ಮಾತನಾಡಿ, ಹೊಟ್ಯಾಪುರ ಮಠಕ್ಕೆ ಹೊಂದಿಕೊಂಡಿರುವ ಹಿರೇಹಳ್ಳಕ್ಕೆ ತಡೆಗೋಡೆ ನಿರ್ಮಾಣ ಮಾಡಿಸುವ ಭರವಸೆಯನ್ನು ಗ್ರಾಮೀಣಾಭಿವೃದ್ಧಿ ಸಚಿವರು ನೀಡಿದ್ದಾರೆ ಎಂದು ತಿಳಿಸಿದರು.

ಮಾಜಿ ಶಾಸಕ ಡಿ.ಜಿ ಶಾಂತನಗೌಡ್ರು, ಹಾಲು ಒಕ್ಕೂಟದ ಉಪಾಧ್ಯಕ್ಷ ಎಚ್.ಕೆ. ಬಸಪ್ಪ ಮಾತನಾಡಿದರು. ಸಭೆಯಲ್ಲಿ ಜಿ.ಪಂ. ಮಾಜಿ ಸದಸ್ಯರುಗಳಾದ ಸುರೇಂದ್ರ ನಾಯ್ಕ್, ಕುಳಗಟ್ಟೆ ಎ.ಆರ್.ಚಂದ್ರಶೇಖರಪ್ಪ, ಎಪಿಎಂಸಿ ಅಧ್ಯಕ್ಷ ಜಿ.ವಿ.ಎಂ. ರಾಜು, ರಾಂಪುರ ಗ್ರಾ.ಪಂ. ಮಾಜಿ ಅಧ್ಯಕ್ಷೆ ಸುಶೀಲಮ್ಮ ಇದ್ದರು.

# ಅನಿತ್ ವಿಧಾನಸಭೆಗೆ ಸ್ಪರ್ಧೆ..?

**(1ನೇ ಪುಟದಿಂದ)** ಮುಖಂಡ ಸಂಸದರ ಪುತ್ರ ಅನಿತ್ ಅವರು ಮುಂದಿನ ದಿನಗಳಲ್ಲಿ ಶಾಸಕರಾಗಿ ನಮ್ಮ ಜೊತೆ ವಿಧಾನಸೌಧದಲ್ಲಿ ಇರುತ್ತಾರೆ ಎಂದು ಹೇಳಿರುವುದು, ಅನಿತ್ ಅವರ ಮುಂದಿನ ರಾಜಕೀಯ ಭವಿಷ್ಯದ ಮುನ್ನುಡಿಯಾಗಲಿದೆಯೇ?

ಅನಿತ್ ಅವರು ಯಾವ ಕ್ಷೇತ್ರದಲ್ಲಿ ಸ್ಪರ್ಧಿಸುತ್ತಾರೆ ಎಂಬುದನ್ನು ಸ್ಪಷ್ಟವಾಗಿ ಹೇಳದಿದ್ದರೂ ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಸ್ಪರ್ಧಿಸುವ ಸುಳಿವು ನೀಡಿದ್ದಾರೆ.

**ಚುನಾವಣೆಯಲ್ಲಿ ಸ್ಪರ್ಧೆ ; ಪಕ್ಷದ ತೀರ್ಮಾನಕ್ಕೆ ಬದ್ಧ**
**- ಜಿ.ಎಸ್. ಅನಿತ್‌ಕುಮಾರ್**

ಚುನಾವಣೆಯಲ್ಲಿ ಸ್ಪರ್ಧಿಸುವ ಬಗ್ಗೆ 'ಜನತಾವಾಣಿ' ಯೊಂದಿಗೆ ಮಾತನಾಡಿದರು.

**ಪತ್ರಿಕೆ:** ಚುನಾವಣೆಯಲ್ಲಿ ಸ್ಪರ್ಧಿಸುವುದು ನಿಶ್ಚಿತವೇ?

**ಅನಿತ್‌ಕುಮಾರ್:** ನಾನು ಈಗಾಗಲೇ ಪಕ್ಷ ವಹಿಸಿದ ಕೆಲಸಗಳನ್ನು ಮಾಡುತಿದ್ದೇನೆ. ಜನಸೇವೆ ಮಾಡಲು ಶಾಸಕರು ಆಗಬೇಕೆಂದೇನೂ ಇಲ್ಲ.ಶಾಸಕ, ಸಂಸದರಾದರೆ ಇನ್ನೂ ಹೆಚ್ಚಿನ ಜನರ ಸೇವೆ ಮಾಡಲು ಸಹಕಾರಿಯಾಗಲಿದೆ.

**ಪತ್ರಿಕೆ :** ಸ್ಪರ್ಧಿಸುವುದಾದರೆ ಯಾವ ಕ್ಷೇತ್ರದಿಂದ? ಚಿತ್ರದುರ್ಗ ಜಿಲ್ಲೆಯೋ ಅಥವಾ ದಾವಣಗೆರೆ ಜಿಲ್ಲೆಯೋ?

**ಅನಿತ್‌ಕುಮಾರ್ :** ಇದರ ಬಗ್ಗೆ ನಾನು ಹೇಳಲು ಬರುವುದಿಲ್ಲ, ನಾನು ಸ್ಪರ್ಧಿಸಬೇಕೇ? ಬೇಡವೇ? ಯಾವ ಕ್ಷೇತ್ರದಿಂದ? ಎಂಬುದನ್ನು ಪಕ್ಷ ನಿರ್ಧರಿಸುತ್ತದೆ. ಪಕ್ಷದ ತೀರ್ಮಾನಕ್ಕೆ ಬದ್ಧ.

**ಪತ್ರಿಕೆ :** ಸ್ಪರ್ಧಿಸಿದರೆ ಯಾವ ಜಿಲ್ಲೆಯಿಂದ ಯಾವ ಕ್ಷೇತ್ರದಿಂದ ಸ್ಪರ್ಧಿಸಲು ಬಯಸುವಿರಿ?

**ಅನಿತ್‌ಕುಮಾರ್ :** ನನಗೆ ಯಾವುದಾದರೂ ಕ್ಷೇತ್ರದಲ್ಲಿ ಸ್ಪರ್ಧಿಸಲು ಆಸೆ ಇರಬಹುದು, ಆದರೆ ಅಂತಿಮವಾಗಿ ಪಕ್ಷದ ತೀರ್ಮಾನವೇ ನನ್ನ ತೀರ್ಮಾನ.

ಅಂಥ ಸಂದರ್ಭ ಬಂದಲ್ಲಿ ಸೂಕ್ತ ತೀರ್ಮಾನ ಕೈಗೊಳ್ಳುತ್ತೇನೆ. ಪಕ್ಷ ತಿಳಿಸಬೇಕು ಮತ್ತು ಜನರ ಅಭಿಪ್ರಾಯವೂ ಇರಬೇಕು. ಜನರ ಅಭಿಪ್ರಾಯ ಆಧರಿಸಿ ಪಕ್ಷ ಎಲ್ಲೇ ಸ್ಪರ್ಧಿಸಲು ತಿಳಿಸಿದರೂ ಸ್ಪರ್ಧಿಸಲು ಸಿದ್ಧ. ಜನರ ಅಭಿಪ್ರಾಯವೂ ಬಹಳ ಮುಖ್ಯವಾಗಿರುತ್ತದೆ.

**ಪತ್ರಿಕೆ :** ಚಿತ್ರದುರ್ಗ ಜಿಲ್ಲೆಯಲ್ಲಿ ಹೆಚ್ಚು ಸಕ್ರಿಯರಾಗೀದ್ದೀರಿ ಏಕೆ?

ಪಕ್ಷ ಯಾವುದೇ ಕೆಲಸ ನೀಡಿದರೂ ನಾವು ಮಾಡಲು ಸಿದ್ಧ. ಹೊಳಲ್ಕೆರೆ ವಿಧಾನಸಭಾ ಕ್ಷೇತ್ರದ ಜವಾಬ್ದಾರಿಯನ್ನು ಪಕ್ಷ ನೀಡಿದೆ. ಆರೋಗ್ಯ ಸೇವಾ ಅಭಿಯಾನದ ಸಂಚಾಲಕನನ್ನಾಗಿ ಮಾಡಿದ್ದಾರೆ. ಆ ಕಾರ್ಯಕ್ರಮಗಳ ಬಗ್ಗೆ ಉಸ್ತುವಾರಿಯನ್ನು ನೀಡಿದ್ದಾರೆ. ಅದನ್ನು ಯಶಸ್ವಿಯಾಗಿ ನಿಭಾಯಿಸುತ್ತಿದ್ದಾನೆ.

ಪಕ್ಷದ ತೀರ್ಮಾನಕ್ಕೆ ನಾನು ಬದ್ಧ , ಇದರಲ್ಲಿ ಎರಡನೇ ಮಾತೇ ಇಲ್ಲ. ಜನರ ಅಭಿಪ್ರಾಯ ಆಧರಿಸಿ ಪಕ್ಷ ನಿರ್ಧಾರ ಕೈಗೊಳ್ಳುವ ತೀರ್ಮಾನಕ್ಕೆ ನಾನು ಸಿದ್ಧ.

# ಪ್ರವಾಸಿ ತಾಣವಾಗಿ ಹರಿಹರ ಅಭಿವೃದ್ಧಿ

**(1ನೇ ಪುಟದಿಂದ)** ಮಾಡುವುದು ಹಾಗೂ ಈ ಪ್ರದೇಶವನ್ನು ಪ್ರವಾಸಿ ತಾಣವನ್ನಾಗಿ ಮಾಡಿದರೆ ಯುವಕರಿಗೆ ಉದ್ಯೋಗ ಸಿಗುತ್ತದೆ ಎಂದರು.

ಈ ನಿಟ್ಟಿನಲ್ಲಿ ಸರ್ಕಾರದಿಂದ 30 ಕೋಟಿ ರೂ. ಬಿಡುಗಡೆಯಾಗಿದೆ. ರಾಜ್ಯದ ಹೃದಯ ಭಾಗದಲ್ಲಿರುವ ಈ ನಗರವನ್ನು ಸುಂದರ ಪ್ರವಾಸಿ ತಾಣವಾಗಿ ಅಭಿವೃದ್ಧಿ ಮಾಡಿ ಕಾಶಿ ಮಾದರಿಯಲ್ಲಿ 300 ಕೈಲಾಸ ಕಾರಿಡಾರ್ ಮಾಡುವ ಮೂಲಕ ಇಲ್ಲಿನ ನದಿಯಲ್ಲಿ ಪೂಜೆಗೆ ಮತ್ತು ಅಧ್ಯಾತ್ಮಿಕ ಕಾರ್ಯಕ್ಕೆ ಹೆಚ್ಚು ಮಹತ್ವ ನೀಡಲಾಗುತ್ತದೆ ಎಂದರು.

ದೇಶದಾದ್ಯಂತ ಹಿಂದುತ್ವ, ಸನಾತನ ಧರ್ಮ, ರಾಷ್ಟ್ರೀಯತೆ, ಸಂಸ್ಕೃತಿ, ಸಂಸ್ಕಾರ ಉಳಿಸಿ ಬೆಳೆಸುವ ಕಾರ್ಯವನ್ನು ಮಾಡಬೇಕಾಗಿದೆ. ಜೊತೆಗೆ ಯುವಕರಿಗೆ ಉದ್ಯೋಗ ಮತ್ತು ಈ ಭಾಗದ ರೈತರ ಬೇಡಿಕೆಯಾದ ಭೈರನಪಾದ ಯೋಜನೆಗೆ ಆದ್ಯತೆ ನೀಡಬೇಕು ಮತ್ತು ಶ್ರೀ ಹರಿಹರೇಶ್ವರ ದೇವಾಲಯಕ್ಕೆ ಶ್ರೀ ಶಂಕರಾಚಾರ್ಯರು ಆಗಮಿಸಿದ್ದರಿಂದ ಇಲ್ಲಿನ ದೇವಾಲಯದ ಬಳಿ ಶ್ರೀ ಶಂಕರಾಚಾರ್ಯರ ಮೂರ್ತಿ ಸ್ಥಾಪಿಸುವುದು ಸೇರಿದಂತೆ, ಇಲ್ಲಿನ ತುಂಗಭದ್ರಾ ನದಿ ದಂಡೆಯನ್ನು ಇಡೀ ಜಗತ್ತೇ ತಿರುಗಿ ನೋಡುವಂತೆ ಮಾಡುವ ಕಾರ್ಯವನ್ನು ನಾವು ಮುಂದಿನ ದಿನಗಳಲ್ಲಿ ಮಾಡುವುದಾಗಿ ಹೇಳಿದರು.

ಈ ಸಂದರ್ಭದಲ್ಲಿ ಸಚಿವರಾದ ಮುರುಗೇಶ್ ನಿರಾಣಿ, ಶಂಕರ್ ಪಾಟೀಲ್ ಮುನೇನಕೊಪ್ಪ, ಭೈರತಿ ಬಸವರಾಜ್, ಸಂಸದ ಜಿ.ಎಂ. ಸಿದ್ದೇಶ್ವರ್, ಶಾಸಕ ಎಸ್.ರಾಮಪ್ಪ, ರಾಣೇಬೆನ್ನೂರು ಶಾಸಕ ಅರುಣ್ ಕುಮಾರ್ ಪೂಜಾರ್, ನಗರಸಭೆ ಅಧ್ಯಕ್ಷೆ ರತ್ನ ಡಿ. ಉಜ್ಜೇಶ್, ಮಾಜಿ ಶಾಸಕ ಬಿ.ಪಿ. ಹರೀಶ್, ಜಿಲ್ಲಾ ಬಿಜೆಪಿ ಅಧ್ಯಕ್ಷ ಎಸ್.ಎಂ. ವೀರೇಶ್ ಹನಗವಾಡಿ, ಚಂದ್ರಶೇಖರ್ ಪೂಜಾರ್, ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ, ಜಿ.ಪಂ. ಸಿಇಒ ವಿಜಯ ಮಹಾಂತೇಶ್ ದಾನಮ್ಮನವರ್, ಎಸ್ಪಿ ಸಿ.ಬಿ. ರಿಷ್ಯಂತ್, ನೀರಾವರಿ ಇಲಾಖೆ ಅಧಿಕಾರಿ ಮಲ್ಲಿಕಾರ್ಜುನ ಗುಂಗೆ, ದೂಡಾ ಅಧ್ಯಕ್ಷ ದೇವರಮನಿ ಶಿವಕುಮಾರ್, ತಹಶೀಲ್ದಾರ್ ಕೆ. ಬಿ. ರಾಮಚಂದ್ರಪ್ಪ, ಪೌರಾಯುಕ್ತೆ ಎಸ್.ಲಕ್ಷ್ಮಿ, ನಗರಸಭೆ ಎಇಇ ಬಿರಾದಾರ ಇತರರು ಉಪಸ್ಥಿತರಿದ್ದರು.

ವೇದಿಕೆ ಸಮಾರಂಭದಲ್ಲಿ ಸ್ಥಳೀಯ ಜಿಲ್ಲಾ ಉಸ್ತುವಾರಿ ಸಚಿವ ಭೈರತಿ ಬಸವರಾಜ್, ಸಂಸದ ಜಿ.ಎಂ. ಸಿದ್ದೇಶ್ವರ್ ಮತ್ತು ಶಾಸಕ ಎಸ್ ರಾಮಪ್ಪ ನವರಿಗೆ ಮಾತನಾಡಲು ಅವಕಾಶ ಸಿಗದೆ, ಕೇವಲ ಮನವಿ ನೀಡುವುದಕ್ಕೆ ಮಾತ್ರ ವೇದಿಕೆ ಸೀಮಿತವಾಯಿತು.

# ಕಂದಾಯ ಗ್ರಾಮಗಳನ್ನಾಗಿ ಪರಿವರ್ತಿಸಿ

**(1ನೇ ಪುಟದಿಂದ)** 1ನೇ ದರ್ಜೆಯ ಪ್ರಜೆಗಳಾಗಿ ಉಳಿಯುವುದಕ್ಕೆ ಸಾಧ್ಯವಾಗುತ್ತದೆ. ಎಂದರು

ಪಂಚ ರಾಜ್ಯಗಳ ಚುನಾವಣೆ ಮುಗಿದ ಬಳಿಕ ರಾಜ್ಯ ಕೆ.ಪಿ.ಸಿ.ಸಿ ಪುನರ್ ರಚನೆ ಆಗುವ ಸಾಧ್ಯತೆಯಿದೆ. ನಾನು ಕೂಡ ಕೆ.ಪಿ.ಸಿ.ಸಿ.ಯಲ್ಲಿ ಒಂದು ಹುದ್ದೆಯ ಆಕಾಂಕ್ಷಿ ಇದ್ದೇನೆ. ಕಾಂಗ್ರೆಸ್ ಹೈಕಮಾಂಡ್ ಮೇಲೆ ನಂಬಿಕೆಯಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಹಿಜಾಬ್ ಮತ್ತು ಕೇಸರಿಗೆ ಸಂಬಂಧಪಟ್ಟ ವಿಚಾರ ನ್ಯಾಯಾಲಯದಲ್ಲಿದೆ. ನಾವು ದೇಶದ ಸಂವಿಧಾನವನ್ನು ಗೌರವಿಸಬೇಕು. ನ್ಯಾಯಾಲಯದ ತೀರ್ಪು ಬರಬೇಕಾಗಿದೆ. ಹಿಜಾಬ್ ಎನ್ನುವುದು ಅವರವರ ಸಂಸ್ಕೃತಿ, ವಿರೋಧ ಮಾಡುವುದು ಸರಿಯಲ್ಲ. ಸಚಿವ ಈಶ್ವರಪ್ಪ ಬಿಜೆಪಿಯ ಹಿರಿಯ ರಾಜಕಾರಣಿ. ಅವರ ಬಾಯಿಯಲ್ಲಿ ರಾಷ್ಟ್ರದ್ರೋಹದ ಮಾತುಗಳು ಬರಬಾರದು. ಅವರು ರಾಷ್ಟ್ರಧ್ವಜಕ್ಕೆ ಅವಮಾನ ಮಾಡಿದ್ದಾರೆ ಎಂದರು.

# ಎಲಿಜಬೆತ್‌ಗೆ ಕೊರೊನಾ

**(1ನೇ ಪುಟದಿಂದ)** ಫೆಬ್ರುವರಿ 10 ರಂದು ವಿಂಡ್ಸರ್‌ನಲ್ಲಿ ತಾಯಿಯನ್ನು ಭೇಟಿಯಾಗಿದ್ದರು. ಅದಾದ ಎರಡು ದಿನಗಳಲ್ಲಿ ಚಾರ್ಲ್ಸ್ ಅವರಿಗೆ ಕೋವಿಡ್ ದೃಢವಾಗಿತ್ತು.

# ನಗರದಲ್ಲಿ ಇಂದು ಸಮೂಹ ಕೋಲಾಟ

ಶ್ರೀ ಪುಟ್ಟರಾಜ ನಗರದ (ಬಾಡಾ ಕ್ರಾಸ್) ಶ್ರೀ ವೀರೇಶ್ವರ ಪುಣ್ಯಾಶ್ರಮದಲ್ಲಿ ಇಂದು ಮಧ್ಯಾಹ್ನ 2 ಗಂಟೆಗೆ ಕಲಾಕುಂಚ ಮಹಿಳಾ ವಿಭಾಗದಿಂದ ಸಮೂಹ ಕೋಲಾಟ ನೃತ್ಯ ಹಮ್ಮಿಕೊಳ್ಳಲಾಗಿದೆ ಎಂದು ಕಲಾಕುಂಚ ಮಹಿಳಾ ವಿಭಾಗದ ಅಧ್ಯಕ್ಷರಾದ ಹೇಮಾ ಶಾಂತಪ್ಪ ಪೂಜಾರಿ ತಿಳಿಸಿದ್ದಾರೆ.

ಕಲಾಕುಂಚ ಮಹಿಳಾ ವಿಭಾಗದ ಉಪಾಧ್ಯಕ್ಷರಾದ ಶೈಲಾ ವಿಜಯಕುಮಾರ್ ನಿರ್ದೇಶನದಲ್ಲಿ ಈ ಮಹಿಳಾ ಕೋಲಾಟ ನೃತ್ಯ ಪ್ರದರ್ಶನ ನಡೆಯಲಿದೆ ಎಂದು ಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಸುನಂದಾದೇವಿ ಜಂಬನಗೌಡ ವಿವರಿಸಿದ್ದಾರೆ.

**ಸೈಟು ಬೇಕಾಗಿದೆ**
ದಾವಣಗೆರೆಯ ಶಿವಕುಮಾರ ಸ್ವಾಮಿ ಮತ್ತು ವಿದ್ಯಾನಗರ ಬಡಾವಣೆಯಲ್ಲಿ ಸೈಟು ಬೇಕಾಗಿದೆ. ಮಾರುವವರು ಸಂಪರ್ಕಿಸಿರಿ.
**98809 33630**

**ಮದ್ಯವ್ಯಸನಿಗೆ ಅರಿವಿಲ್ಲದಂತೆ ಮದ್ಯ ಸೇವನೆ ಬಿಡಿಸಿರಿ**
ಪ್ರತಿ ತಿಂಗಳು 7 ಮತ್ತು 21ನೇ ತಾರೀಖು ಜನತಾ ಡೀಲಕ್ಸ್ ಲಾಡ್ಜ್, KSRTC ಹೊಸ ಬಸ್ ಸ್ಟ್ಯಾಂಡ್ ಎದುರು, ದಾವಣಗೆರೆ. 4 ಮತ್ತು 18 ರಂದು ಕಾವೇರಿ ಲಾಡ್ಜ್, ಪೂನಾ - ಬೆಂಗಳೂರು ರೋಡ್, ಹಾವೇರಿ.
**ಅಸ್ತಮಾ, ಕೀಲು ನೋವು**
ಡಾ|| ಎಸ್.ಎಂ. ಸೇಠಿ. ಫೋ. : 96322 95561
ಸಮಯ: ಬೆಳಿಗ್ಗೆ 10 ರಿಂದ ಮಧ್ಯಾಹ್ನ 2 ರವರೆಗೆ

**ಶ್ರೀ ಧರ್ಮಸ್ಥಳ ಮಂಜುನಾಥಸ್ವಾಮಿ ದೈವಶಕ್ತಿ ಜ್ಯೋತಿಷರು**
ಪಂ. ಮಂಜುನಾಥ ಭಟ್, ನಂ.1 ವಶೀಕರಣ ಸ್ಪೆಷಲಿಸ್ಟ್ ಸಮಸ್ಯೆ, ವಿದ್ಯೆ, ಉದ್ಯೋಗ, ಆರೋಗ್ಯ ಹಣಕಾಸು, ಸಾಲಬಾಧೆ, ಮಾಟ-ಮಂತ್ರ, ವಿ ಸೂ: ಸ್ತ್ರೀ- ಪುರುಷ ವಶೀಕರಣಕ್ಕೆ ಕೇವಲ 3 ದಿನಗಳಲ್ಲಿ ಪರಿಹಾರ ಶತಸಿದ್ಧ, ನಿಮ್ಮ ಯಾವುದೇ ಸಮಸ್ಯೆಯಿದ್ದರೂ ಫೋನಿನ ಮೂಲಕ ಸಂಪರ್ಕಿಸಿ ಸಮಸ್ಯೆ ಪರಿಹರಿಸಿಕೊಳ್ಳಿ
**82176 83615**

# ಅಧ್ಯಾತ್ಮಿಕ ಜ್ಞಾನದಿಂದ ಮಾತ್ರ ಪರಿವರ್ತನೆ

**(1ನೇ ಪುಟದಿಂದ)** ಸಾಧ್ಯ.ಇದು ಕಠಿಣವಾದರೂ ಸತತ ಪರಿಶ್ರಮದಿಂದ ಸಾಧ್ಯವಿದೆ ಎಂದರು.

ಪ್ರತಿ ನಿತ್ಯ ವ್ಯಾಯಾಮ ಮಾಡುವುದರಿಂದ ಹೇಗೆ ದೇಹ ಸದೃಢಗೊಳ್ಳುವುದೋ ಹಾಗೆಯೇ ಮನಸ್ಸನ್ನೂ ಗಟ್ಟಿಗೊಳಿಸುವುದು ಮುಖ್ಯ. ಈ ನಿಟ್ಟಿನಲ್ಲಿ ನಿತ್ಯ ಮುಂಜಾನೆ ನಮ್ಮನ್ನು ನಾವು 'ನಾನು ಯಾರು? ನನ್ನ ರೂಪ ಏನು? ದೈವೀ ಗುಣ ಹಾಗೂ ರಾಕ್ಷಸಿ ಗುಣದಲ್ಲಿ ನನ್ನ ಗುಣ ಯಾವುದು?' ಎಂಬುದು ಪ್ರಶ್ನಿಸಿಕೊಳ್ಳುವ ಅಗತ್ಯವಿದೆ ಎಂದರು.

ಅಧ್ಯಾತ್ಮಿಕ ಜ್ಞಾನವಿದ್ದಾಗ ಮಾತ್ರ ನಿಸ್ವಾರ್ಥ ಸೇವೆ ಮಾಡಲು ಸಾಧ್ಯ. ಇಲ್ಲದಿದ್ದರೆ ಅದು ಹೆಸರಿಗಾಗಿ ಮಾಡುವ ಸೇವೆಯಾಗುತ್ತದೆ. ಎಲ್ಲಿ ನಾನು ಮತ್ತು ನನ್ನದು ಇರುತ್ತದೋ ಅಲ್ಲಿ ದುಃಖ, ಅಶಾಂತಿ ಇದ್ದೇ ಇರುತ್ತದೆ. ನಾವು ಏನನ್ನೂ ತಂದಿಲ್ಲ. ನಾಳೆ ಏನನ್ನೂ ತೆಗೆದುಕೊಂಡು ಹೋಗುವುದಿಲ್ಲ. ಆದರೆ ನಾವು ಈ ಶರೀರದಲ್ಲಿದ್ದುಕೊಂಡು ಮಾಡಿದ ಕರ್ಮವನ್ನು ಮಾತ್ರ ತೆಗೆದುಕೊಂಡು ಹೋಗಲು ಸಾಧ್ಯವಿದೆ. ಅದಕ್ಕಾಗಿ ನಾವು ನಿತ್ಯ ಮಾಡುವ ಕರ್ಮಗಳ ಬಗ್ಗೆ ಎಚ್ಚರ ವಹಿಸುವುದು ಮುಖ್ಯ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಪ್ರಾಂತ್ಯ-9ರ ಅಧ್ಯಕ್ಷರಾದ ಇ.ಎಂ. ಮಂಜುನಾಥ ಮಾತನಾಡುತ್ತಾ, ಬಡ ವಿದ್ಯಾರ್ಥಿಗಳಿಗೆ ಸೈಕಲ್, ಲ್ಯಾಪ್‌ಟಾಪ್, ಮಹಿಳೆಯರಿಗೆ ಹೊಲಿಗೆ ಯಂತ್ರ, ವೃದ್ಧರಿಗೆ ಸೀರೆ, ಶ್ರವಣ ಸಾಧನ ವಿತರಿಸಲಾಗಿದೆ. 1 ಲಕ್ಷ ನೋಟ್ ಪುಸ್ತಕಗಳನ್ನು ವಿತರಿಸುವುದು ನನ್ನ ಕನಸಾಗಿತ್ತು. ಅದೂ ಈಡೇರಿದೆ ಎಂದು ಹೇಳುತ್ತಾ, ದಾನಿಗಳಿಗೆ ಧನ್ಯವಾದ ಅರ್ಪಿಸಿದರು.

ಕಾರ್ಯಕ್ರಮದ ದಿವ್ಯ ಸಾನ್ನಿಧ್ಯ ವಹಿಸಿದ್ದ ಈಶ್ವರೀಯ ವಿಶ್ವವಿದ್ಯಾಲಯದ ಸಂಚಾಲಕರಾದ ರಾಜಯೋಗಿನಿ ಬ್ರಹ್ಮಾಕುಮಾರಿ ಲೀಲಾಜಿ ತಮ್ಮ ಆಶೀರ್ವಚನದಲ್ಲಿ, ನೀರು ಸದಾ ಹರಿಯದಿದ್ದರೆ ಹೇಗೆ ದುರ್ಗಂಧ ಬೀರುತ್ತದೆಯೋ, ಹಾಗೆಯೇ ಪರಿವರ್ತನೆ ಇಲ್ಲದಿದ್ದರೆ ಜಗತ್ತು ಉತ್ಥಾನದಿಂದ ಪತನದ ಕಡೆ ಸಾಗುತ್ತದೆ ಎಂದರು.

ಭ್ರಷ್ಟಾಚಾರದಿಂದ ಶ್ರೇಷ್ಟಾಚಾರದ ಕಡೆ, ಅಜ್ಞಾನದಿಂದ ಸುಜ್ಞಾನ ಕಡೆ, ದುರ್ಗತಿಯಿಂದ ಸದ್ಗತೆಯ ಕಡೆಗೆ, ದುಃಖದಿಂದ ಸುಖದ ಕಡೆ ಸಾಗುವ ಪರಿವರ್ತನೆ ಇಂದು ಅಗತ್ಯವಿದೆ. ಅದು ಈ ಸಭೆಯಿಂದಲೇ ಆರಂಭವಾಗಲಿ ಎಂದು ಆಶಿಸಿದರು.

ದೇವನಗರಿಯ ಧೀಮಂತ ಬಿರುದಿನೊಂದಿಗೆ ಸನ್ಮಾನ ಸ್ವೀಕರಿಸಿ ಮಾತನಾಡಿದ 'ಜನತಾವಾಣಿ' ಸಂಪಾದಕ ಎಂ.ಎಸ್. ವಿಕಾಸ್, ಸನಾತನ ಧರ್ಮದಲ್ಲಿ ಸೇವೆಗೆ ಮಹತ್ವದ ಸ್ಥಾನವಿದೆ. ಹಿಂದೂ ಧರ್ಮ ಹೊರತುಪಡಿಸಿದರೆ ಬೇರಾವ ಧರ್ಮದಲ್ಲೂ ಸೇವೆಗೆ ಇಷ್ಟೊಂದು ಮಹತ್ವ ನೀಡಿಲ್ಲ ಎಂದರು.

ಯಾವ ಫಲಾಪೇಕ್ಷೆ ಇಲ್ಲದೆ, ಬೇರೆಯವರ ಒಳಿತಿಗಾಗಿ ಮಾಡುವ ಉದಾತ್ತ ಕೆಲವೇ ಸೇವೆ. ಸಾಮಾನ್ಯವಾಗಿ ಲಾಭಕ್ಕಾಗಿ ಕೆಲಸಗಳನ್ನು ಮಾಡುತ್ತೇವೆ. ಆದರೆ ಯಾವುದೇ ಲಾಭ ಇಲ್ಲದೆ ಬೇರೆಯವರಿಗೆ ಉಪಕಾರ ಮಾಡುವುದು ಸೇವೆ ಎಂದರು.

ಕೆಲವರು ಕಣ್ಣಿಗೆ ಕಾಣದಂತೆ ಸೇವಾ ಕಾರ್ಯದಲ್ಲಿ ತೊಡಗಿಸಿಕೊಂಡರೆ, ಮತ್ತೆ ಕೆಲ ವರು ಸಂಘ-ಸಂಸ್ಥೆಗಳನ್ನು ಸ್ಥಾಪಿಸಿಕೊಂಡು ಸೇವೆ ಮಾಡುತ್ತಾರೆ. ಲಯನ್ಸ್ ಕ್ಲಬ್ ಸೇವೆಗಾಗಿಯೇ ಸ್ಥಾಪನೆಯಾದ ಸಂಸ್ಥೆಯಾಗಿದ್ದು, ವಿವಿಧ ವೃತ್ತಿಪರರು ತಮ್ಮ ಬಿಡುವಿನ ವೇಳೆಯಲ್ಲಿ ಸಂಘಟಿತ ರಾಗಿ ಸೇವಾ ಕಾರ್ಯಗಳಲ್ಲಿ ತೊಡಗಿಸಿ ಕೊಳ್ಳುತ್ತಿರುವುದು ಶ್ಲಾಘನೀಯ ಎಂದರು.

ರಾಮನಾಥ್ ಜೀ ಅವರು ಅರ್ಥಗರ್ಭಿತ ಅಧ್ಯಾತ್ಮಿಕ ನುಡಿಗಳನ್ನಾಡಿದ್ದಾರೆ ಎಂದ ವಿಕಾಸ್, ಲಯನ್ಸ್ ಕ್ಲಬ್ ಸೇವೆ ಹಾಗೂ ಇ.ಎಂ. ಮಂಜುನಾಥ ಅವರ ಸೇವಾ ಕಾರ್ಯಗಳು ಹೀಗೆಯೇ ಮುಂದುವರೆಯಲಿ ಎಂದು ಆಶಿಸಿದರು.


ದೇವನಗರಿಯ ಧೀಮಂತ ಬಿರುದಿನೊಂ ದಿಗೆ ಸನ್ಮಾನಿತರಾಗಿ ಮಾತನಾಡಿದ ಡಾ. ಬಿ.ಎಸ್. ನಾಗಪ್ರಕಾಶ್, ಲಯನ್ಸ್ ಕ್ಲಬ್‌ಗೆ ಅಡಿ ಪಾಯ ಹಾಕಿದ ಗಣ್ಯರನ್ನು ನೆನೆಯುತ್ತಾ, ಪ್ರಸ್ತುತ ಕಾರ್ಯಚಟುವಟಿಕೆಗಳನ್ನು ಶ್ಲಾಘಿಸಿದರು. ಅಲ್ಲದೇ, ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವ ರೀಯ ವಿಶ್ವವಿದ್ಯಾಲಯಕ್ಕೆ ವೈಯಕ್ತಿಕವಾಗಿ 50 ಸಾವಿರ ರೂ.ಗಳ ಧೇಣಿಗೆಯ ಚೆಕ್ ನೀಡಿದರು.

ಮುಖ್ಯ ಅತಿಥಿಯಾಗಿ ಆಗಮಿಸಿದ್ದ ಜಿಲ್ಲಾ ಲಯನ್ಸ್ ವಿಶ್ರಾಂತ ರಾಜ್ಯಪಾಲ ರವಿ ಆರ್. ಹೆಗಡೆ, ನಮ್ಮ ಬದಲಾವಣೆಗಳು ಬೆಳವಣಿಗೆಗೆ ಪೂರಕವಾಗಿರಬೇಕು ಎಂದರು.

ಶ್ರೀಮತಿ ಶಕುಂತಲ ಮೋಹನ್ ಏಕಬೋಟೆ ಕಾರ್ಯಕ್ರಮವನ್ನು ಉದ್ಘಾಟಿಸಿದರು. ಜಿಲ್ಲಾ ಲಯನ್ಸ್ ಪ್ರಥಮ ಉಪರಾಜ್ಯಪಾಲ ಎಂ.ಕೆ. ಭಟ್, ಸಮ್ಮೇಳನದ ಕಾರ್ಯದರ್ಶಿ ಬೆಳ್ಳೂಡಿ ಶಿವಕುಮಾರ್, ಖಜಾಂಚಿ ಎನ್.ಸಿ. ಬಸವರಾಜ್, ಲಯನ್ಸ್ ಕ್ಲಬ್ ಅಧ್ಯಕ್ಷ ಎಸ್. ಓಂಕಾರಪ್ಪ, ಕಾರ್ಯದರ್ಶಿ ಕೋರಿ ಶಿವಕುಮಾರ್, ಖಜಾಂಚಿ ಕಣವಿ ನಟರಾಜ್, ಸಹ ಕಾರ್ಯದರ್ಶಿ ಎಸ್.ಕೆ. ಮಲ್ಲಿಕಾರ್ಜುನ್, ವಲಯ ಅಧ್ಯಕ್ಷರುಗಳಾದ ಎಸ್. ವೆಂಕಟಾಚಲಂ, ಡಾ.ಜಿ.ಎನ್. ಹೆಚ್. ಕುಮಾರ್, ಎಂ.ಬಿ. ಶಿವಕುಮಾರ್, ಜಿಲ್ಲಾ ಲಯನ್ಸ್ ಮಾಜಿ ರಾಜ್ಯಪಾಲರುಗಳಾದ ಡಾ.ಟಿ.ಬಸವರಾಜ್, ಹೆಚ್. ಎನ್. ಶಿವಕುಮಾರ್, ಎ.ಆರ್. ಉಜ್ಜಿನಪ್ಪ ಇತರರು ಉಪಸ್ಥಿತರಿದ್ದರು. ಹೆಚ್.ವಿ. ಮಂಜುನಾಥ ಸ್ವಾಮಿ ಅವರು ಪ್ರಾಂತೀಯ ಅಧ್ಯಕ್ಷರನ್ನು ಪ್ರಾಂತೀಯ ಅಧ್ಯಕ್ಷ ಮಂಜುನಾಥ ಅವರ ಪರಿಚಯಿಸಿಕೊಟ್ಟರು.

ಜಾನಪದ ಅಕಾಡೆಮಿ ಸದಸ್ಯರಾದ ಶ್ರೀಮತಿ ರುದ್ರಾಕ್ಷಿಬಾಯಿ ಪ್ರಾರ್ಥಿಸಿದರು. ಎನ್.ವಿ. ಬಂಡಿವಾದ ಧ್ವಜ ವಂದನೆ ನೆರವೇರಿಸಿದರು. ಸಮ್ಮೇಳನ ಸಮಿತಿ ಅಧ್ಯಕ್ಷ ಅಜ್ಜಂಪುರ ಶೆಟ್ರು ಮೃತ್ಯುಂಜಯ ಅತಿಥಿಗಳನ್ನು ಸ್ವಾಗತಿಸಿದರು. ಲಯನ್ಸ್ ಚೇರ್ಮನ್ ಸುರಭಿ ಎಸ್. ಶಿವಮೂರ್ತಿ ಕಾರ್ಯಕ್ರಮ ನಿರೂಪಿಸಿದರು.

## ಮಂಜುನಾಥ ಅಣ್ಣ ಅಲ್ಲ ಮಂಜುನಾಥ ಸ್ವಾಮಿ



ಪ್ರಾಂತ್ಯ-9ರ ಪ್ರಾಂತೀಯ ಅಧ್ಯಕ್ಷ ಇ.ಎಂ. ಮಂಜುನಾಥ ಅವರನ್ನು 'ಮಂಜುನಾಥ ಅಣ್ಣ' ಅಲ್ಲ, ಅವರು 'ಮಂಜುನಾಥ ಸ್ವಾಮಿ' ಎಂದು ಸಂಬೋಧಿಸಿದ ರಾಜಯೋಗಿ ಬ್ರಹ್ಮಾಕುಮಾರ ರಾಮನಾಥ್ ಜೀ ಅವರು, ಸೇವೆಯ ಜೊತೆಗೆ ಸಾಧನೆಯನ್ನೂ ಮಾಡುತ್ತಿರುವ ಕಾರಣಕ್ಕಾಗಿ ಅವರು 'ಅಣ್ಣ' ಅಲ್ಲ 'ಸ್ವಾಮಿ' ಎಂದು ಸಂಬೋಧಿಸಿದರು.

ಕಾರ್ಯಕ್ರಮಗಳಲ್ಲಿ ಸಾಮಾನ್ಯವಾಗಿ ಎಲ್ಲರೂ ತಮ್ಮ ಧರ್ಮಪತ್ನಿಯರ ಜೊತೆಗಿರುತ್ತಾರೆ. ಆದರೆ, ಮಂಜುನಾಥ ಸ್ವಾಮಿ ತಮ್ಮ ತಾಯಿ ಗುರು ಅವರನ್ನು ಜೊತೆಗಿಟ್ಟುಕೊಂಡು ಸೇವೆ ಮಾಡುತ್ತಿದ್ದಾರೆ. ಇಂತಹ ವಿಶೇಷತೆಯನ್ನು ನಾನು ಎಲ್ಲಿಯೂ ನೋಡಿರಲಿಲ್ಲ ಎಂದರು.

ನಿಸ್ವಾರ್ಥ ಸೇವೆಗೆ ಧರ್ಮ ಬೇಕು. ಧರ್ಮ ಎಂದರೆ ಧಾರಣೆ. 'ಧಾರಣೆ' ಬರುವುದು ತಾಯಿ ಕಲಿಸುವ ಪಾಠದಿಂದ ಎಂದು ನುಡಿದರು. ಅಂತಹ ತಾಯಿಯನ್ನು ಜೊತೆಗಿಟ್ಟುಕೊಂಡು ಸೇವೆ ಮಾಡುವುದು ವಿಶೇಷತೆ ಎಂದರು.

## ಮಲೇಬೆನ್ನೂರಿನಲ್ಲಿ ವಚನಕಾರ ಸರ್ವಜ್ಞ ಜಯಂತಿ ಆಚರಣೆ



ಮಲೇಬೆನ್ನೂರು, ಫೆ.20- ಇಲ್ಲಿನ ಪುರಸಭೆ ಕಚೇರಿಯಲ್ಲಿ ಕವಿ, ವಚನಾಕಾರ, ಸರ್ವಜ್ಞ ಜಯಂತಿಯನ್ನು ಭಾನುವಾರ ಆಚರಿಸಲಾಯಿತು. ಕಾರ್ಯಕ್ರಮ ಕುರಿತು ಮಾತನಾಡಿದ ಪುರಸಭೆ ಸದಸ್ಯ ಸಾಬೀರ್ ಅಲಿ ಅವರು ಸರ್ವಜ್ಞ ಒಬ್ಬ ಮಹಾನ್ ಕವಿ, ತತ್ವಜ್ಞಾನಿ, ವಾಸ್ತವವಾದಿ, ನೇರವಾಗಿ ವಾಸ್ತವಕ್ಕೆ ತಕ್ಕಂತೆ ವಚನಗಳನ್ನು ರಚಿಸುತ್ತಿದ್ದರು. ಬಸವ ಗುರುವಿನ ಹೆಸರು ಬಲ್ಲವರಾರಿಲ್ಲ ಎಂದರು. ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷ ಭೋವಿ ಕುಮಾರ್, ಪುರಸಭೆ ಸದಸ್ಯರಾದ ಭೋವಿ ಶಿವು, ದಾದಾಪೀರ್, ಪುರಸಭೆ ಸಿಬ್ಬಂದಿಗಳಾದ ಮುಮ್ತಾಜ್, ಗಣೇಶ್, ರೋಹಿತ್ ಮತ್ತಿತರರು ಉಪಸ್ಥಿತರಿದ್ದರು.

## ದೇವರು-ಧರ್ಮ ಭಾರತೀಯರ ಜೀವಾಳ

**(1ನೇ ಪುಟದಿಂದ)** ಶ್ರೀಶೈಲ ಮಲ್ಲಿಕಾರ್ಜುನರ ಕುರಿತ ಕಾರ್ಯಗಳನ್ನು ನೋಡಿ ಈ ಜಾಗ ಮಂಜೂರು ಮಾಡಿದ್ದಾರೆ ಎಂದ ತಿಳಿಸಿದರು.

ಬಾಲೆಹೊಸೂರಿನ ಶ್ರೀ ದಿಂಗಾಲೇಶ್ವರ ಸ್ವಾಮೀಜಿ ಮಾತನಾಡಿ, ಭಾವನಾ ಜೀವಿಯಾದ ಹೇಮರೆಡ್ಡಿ ಮಲ್ಲಮ್ಮ ಶ್ರದ್ಧೆ ಮತ್ತು ಭಕ್ತಿ ಎಂಬ ಅಸ್ತ್ರದ ಮೂಲಕ ಇಡೀ ಸಮಾಜದ ಮೇಲೆ ಬೆಳಕು ಚೆಲ್ಲಿದ ಮಹಾನ್ ಶರಣೆ ಎಂದು ಬಣ್ಣಿಸಿದರು.

ಹೇಮರೆಡ್ಡಿ ಮಲ್ಲಮ್ಮ ಅವರ ಜೀವನ ಮಹಿಳೆಯರಿಗೆ ಮಾದರಿಯಾಗಿದೆ. ಜೀವನದ ಸವಾಲುಗಳು, ಸಮಸ್ಯೆಗಳ ನಡುವೆಯೂ ಸಾಧಿಸಿ ತೋರಿಸಿದವರು ಮಹಾನ್ ಶಿವಶರಣೆ ಮಲ್ಲಮ್ಮ ಎಂದು ತಿಳಿಸಿದರು.

ಹಳ್ಳಿಗಳು ಹುಟ್ಟುವ ಮೊದಲೇ ದೇವಸ್ಥಾನಗಳನ್ನು ಕಟ್ಟಿಕೊಂಡು ಬರಲಾಗುತ್ತಿದೆ. ಹಾಗಾಗಿ ಭಾರತದಲ್ಲಿ ದೇಗುಲಗಳ ನಿರ್ಮಾಣ ಅನಿವಾರ್ಯವಾಗಿದೆ. ದಕ್ಷಿಣ ಭಾರತದಲ್ಲಿ ಸಾವಿರಾರು ವರ್ಷಗಳ ಇತಿಹಾಸವಿರುವ 37 ಸಾವಿರ ದೇವಾಲಯಗಳಿವೆ. ಇವೆಲ್ಲವೂ ಮಾನವ ಶಕ್ತಿಯ ಪ್ರತೀಕ ಎಂದರು.

ನಿಚ್ಚವ್ವನಹಳ್ಳಿ ಶ್ರೀಹಾಲಸ್ವಾಮಿಜೀ ನೇತೃತ್ವ ವಹಿಸಿದ್ದರು. ಸಮಾಜದ ಜಿಲ್ಲಾಧ್ಯಕ್ಷ ಡಾ. ಕೊಟ್ರೇಶ್ ಬಿದರಿ ಅಧ್ಯಕ್ಷತೆ ವಹಿಸಿದ್ದರು. ರಾಜ್ಯಾಧ್ಯಕ್ಷ ಡಾ. ಶೇಖರಗೌಡ ಮಾಲಿ ಪಾಟೀಲ್, ಡಾ. ಜಿ.ಎನ್. ಶಿವಲಿಂಗಮೂರ್ತಿ, ಯರಬಳ್ಳಿ ಉಮಾಪತಿ, ಕೆಪಿಸಿಸಿ ವಕ್ತಾರ ಡಿ. ಬಸವರಾಜ್, ರೇವಣಸಿದ್ಧಪ್ಪ ಮತ್ತಿತರರು ಪಾಲ್ಗೊಂಡಿದ್ದರು. ಕುಸುಮಾ ಲೋಕೇಶ್, ಸುಮತಿ ಜಯ್ಯಪ್ಪ ಕಾರ್ಯಕ್ರಮ ನಿರೂಪಿಸಿದರು. ಶಂಕರ್ ಪಾಟೀಲ್ ಸ್ವಾಗತಿಸಿದರು.

## ಮೈಲಾರಲಿಂಗೇಶ್ವರ ದೇವಸ್ಥಾನದಲ್ಲಿಂದು

ದಾವಣಗೆರೆ ಕೊಂಡಜ್ಜಿ ರಸ್ತೆಯ ಶ್ರೀ ಕ್ಷೇತ್ರ ಶಿಬಾರದ ಶ್ರೀ ಮೈಲಾರ ಲಿಂಗೇಶ್ವರ ಸ್ವಾಮಿಯ ಭರತ ಹುಣ್ಣಿಮೆ ಕಾರ್ಯಕ್ರಮದ ಅಂಗವಾಗಿ ಇಂದು ರಾತ್ರಿ 8 ಕ್ಕೆ 'ಗಡಿ ಪರವು' ನಡೆಯಲಿದೆ. ನಂತರ ಪಲ್ಲಕ್ಕಿ ಉತ್ಸವ ನಡೆಯಲಿದೆ.

# ಮುಂದುವರೆದ ರಾಜನಹಳ್ಳಿ ಶ್ರೀಗಳ ಧರಣಿ : ಶಾಸಕರ ಬೆಂಬಲ





ಬೆಂಗಳೂರು, ಫೆ.20- ಸಮುದಾಯದ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಕೇಂದ್ರ ಮತ್ತು ರಾಜ್ಯ ಸರ್ಕಾರಕ್ಕೆ ಆಗ್ರಹಿಸಿ, ರಾಜನಹಳ್ಳಿ ವಾಲ್ಮೀಕಿ ಗುರುಪೀಠದ ಶ್ರೀ ವಾಲ್ಮೀಕಿ ಪ್ರಸನ್ನಾನಂದ ಸ್ವಾಮೀಜಿ ನಡೆಸುತ್ತಿರುವ ಅಹೋರಾತ್ರಿ ಧರಣಿ ಸತ್ಯಾಗ್ರಹ 12ನೇ ದಿನಕ್ಕೆ ಮುಂದುವರೆದಿದೆ.

ನಿನ್ನೆಯ ಧರಣಿಯಲ್ಲಿ ಭಾಗವಹಿಸಿದ್ದ ಕುಂಚಿಟಿಗ ಮಹಾಸಂಸ್ಥಾನ ಮಠದ ಶ್ರೀ ಶಾಂತವೀರ ಸ್ವಾಮೀಜಿ ಆಶೀರ್ವಚನ ನೀಡಿ, ವಾಲ್ಮೀಕಿ ಶ್ರೀಗಳು ರಾಜನಹಳ್ಳಿಯಿಂದ ರಾಜಧಾನಿಗೆ ಪಾದಯಾತ್ರೆ ಮೂಲಕ ಬಂದು ಶಿಕ್ಷಣ ಮತ್ತು ಉದ್ಯೋಗದಲ್ಲಿ ಮೀಸಲಾತಿ ಹೆಚ್ಚಿಸುವಂತೆ ಆಗ್ರಹ ಮಾಡಿದಾಗ ಆಯೋಗ ರಚನೆಯಾಗಿದ್ದು, ಒಂದು ಹಂತ, ಇನ್ನೂ ಬೆಂಗಳೂರಿನಿಂದ ರಾಜನಹಳ್ಳಿ ಶ್ರೀಮಠಕ್ಕೆ ಮೀಸಲಾತಿ ಪಡೆದುಕೊಂಡು ಹೋಗುವ ಅಚಲ ನಿರ್ಧಾರ ದೊಂದಿಗೆ ಧರಣಿ ಸತ್ಯಾಗ್ರಹ ಕೈಗೊಂಡಿರುವುದು ಈ ಸಮುದಾಯದ ಬಗ್ಗೆ ಅವರಿಗಿರುವ ಕಾಳಜಿ ಮತ್ತು ಸಮುದಾಯದ ಬಗ್ಗೆ ಅವರಿಗಿರುವ ಬದ್ಧತೆ ತೋರಿ ಸುತ್ತಿದೆ. ಸಂತರೊಬ್ಬರು ಸಮುದಾಯದ ಹಿತಕ್ಕಾಗಿ ಪಾದಯಾತ್ರೆ ಮಾಡಬಹುದು ಎಂದು ಮುನ್ನುಡಿ ಬರೆದವರಲ್ಲಿ ವಾಲ್ಮೀಕಿ ಶ್ರೀಗಳು ಮೊದಲಿಗರಾಗುತ್ತಾರೆ. ಯಾವುದೇ ಸಂದರ್ಭದಲ್ಲಿ ನಾವು ಶ್ರೀಗಳ ಬೆಂಬಲಕ್ಕೆ ನಿಲ್ಲುತ್ತೇವೆ. ಈ ವಿಷಯದಲ್ಲಿ ಸರ್ಕಾರ ಸ್ಪಷ್ಟ ನಿರ್ಧಾರ ಪ್ರಕಟಿಸಬೇಕು. ಸಂತರನ್ನು ಧರಣಿ ಕೂರಿಸಿ, ಶಾಪಕ್ಕೆ ಗುರಿಯಾಗಬಾರದು ಎಂದು ಸರ್ಕಾರಕ್ಕೆ ತಿಳಿ ಹೇಳಿದರು.

ಶಾಸಕ ಜಿ. ಹೆಚ್.ತಿಪ್ಪಾರೆಡ್ಡಿ ಮಾತನಾಡಿ, ಚಿತ್ರದುರ್ಗದಲ್ಲಿ ನಾನು ಆರು ಬಾರಿ ಶಾಸಕನಾಗಲು ನಾಯಕ ಸಮಾಜ ಆಶೀರ್ವದಿಸಿದೆ. ಸಮುದಾಯದ ಋಣ ನನ್ನ ಮೇಲಿದೆ. ಶ್ರೀಗಳು ಕೈಗೊಂಡಿರುವ ನಿರ್ಧಾರ ಮತ್ತು ಸರ್ಕಾರಕ್ಕೆ ಆಗ್ರಹ ಮಾಡುತ್ತಿರುವ ಬೇಡಿಕೆ ನ್ಯಾಯಯುತವಾಗಿದೆ ಎಂದರು.

ಹಿರಿಯೂರು ಶಾಸಕರಾದ ಶ್ರೀಮತಿ ಪೂರ್ಣಿಮಾ ಶೀನಿವಾಸ್, ಹೊಸದುರ್ಗ ಶಾಸಕ ಗೂಳಿಹಟ್ಟಿ ಡಿ.ಶೇಖರ್ ಮಾತನಾಡಿ, ಈ ಹೋರಾಟಕ್ಕೆ ಬೆಂಬಲವಿದೆ ಎಂದು ತಿಳಿಸಿದರು.

ಸಭೆಯಲ್ಲಿ ಹರಿಹರ ಮಾಜಿ ಶಾಸಕ ಬಿ.ಪಿ. ಹರೀಶ್ ಹಗರಿಬೊಮ್ಮನಹಳ್ಳಿ, ಮಾಜಿ ಶಾಸಕ ನೇಮಿರಾಜ್ ನಾಯ್ಕ್, ರೋಣ ಮಾಜಿ ಶಾಸಕ ಜೆ.ಎಸ್.ಪಾಟೀಲ್, ಐ.ಎಸ್.ಪಾಟೀಲ್, ಶಿರಹಟ್ಟಿ ಮಾಜಿ ಶಾಸಕ ರಾಮಕೃಷ್ಣ ದೊಡ್ಡಮನಿ, ಚಿತ್ರದುರ್ಗ ನಗರಸಭೆ ಅಧ್ಯಕ್ಷರಾದ ಶ್ರೀಮತಿ ತಿಪ್ಪಮ್ಮ ಸದಸ್ಯರಾದ ವೆಂಕಟೇಶ್, ಜಿಲ್ಲಾಧ್ಯಕ್ಷ ಜಿ. ಕೆ.ಕೃಷ್ಣಮೂರ್ತಿ, ಕಾಂತರಾಜ್ ಮತ್ತು ಹೊಸಪೇಟೆ ಸರಳ ಕಾವ್ಯ, ಪತ್ರಕರ್ತರಾದ ಹುಳ್ಳಿ ಪ್ರಕಾಶ್, ಹರಿಹರ ನಗರಸಭೆ ಸದಸ್ಯರಾದ ದಿನೇಶ್ ಬಾಬು, ಮುಖಂಡರಾದ ಹರ್ತಿಕೋಟೆ ವೀರೇಂದ್ರಸಿಂಹ, ಟಿ.ಈಶ್ವರ್, ಸಿರಿಗೆರೆ ತಿಪ್ಪೇಶ್ ಮತ್ತು ಇತರರು ಸತ್ಯಾಗ್ರಹದಲ್ಲಿ ಭಾಗವಹಿಸಿದ್ದರು.

ಬೆಂಗಳೂರು, ಫೆ.20- ಶಾಸಕ ರಾಜುಗೌಡ, ಸಚಿವ ಆನಂದ್ ಸಿಂಗ್ ಸೇರಿದಂತೆ ಮತ್ತಿತರರು ಮೊನ್ನೆ ಸಚಿವ ಸಂಪುಟದ ಬಿಡುವಿನ ವೇಳೆಯಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರನ್ನು ಭೇಟಿ ಮಾಡಿ, ವಾಲ್ಮೀಕಿ ನಾಯಕ ಜನಾಂಗಕ್ಕೆ ಶೇ. 7.5 ರಷ್ಟು ಮೀಸಲಾತಿ ನೀಡಬೇಕೆಂದು ಮನವಿ ಪತ್ರ ಸಲ್ಲಿಸಿದರು.

ಈ ಸಂದರ್ಭದಲ್ಲಿ ಶಾಸಕ ರಾಜೂಗೌಡ ಮಾತನಾಡಿ, ಶ್ರೀ ಪ್ರಸನ್ನಾನಂದ ಪುರಿ ಮಹಾಸ್ವಾಮೀಜಿ ಅನಿರ್ದಿಷ್ಟ ಧರಣಿ ನಡೆಸುತ್ತಿದ್ದು ಭೇಟಿ ಮಾಡಿ, ಮೀಸಲಾತಿ ವಿಷಯಕ್ಕೆ ಸಂಬಂಧಿಸಿದಂತೆ ಚರ್ಚಿಸುವ ಅವಶ್ಯಕತೆ ಇದೆ ಎಂದು ಮುಖ್ಯಮಂತ್ರಿಗಳ ಗಮನಕ್ಕೆ ತಂದರು.

ಸಚಿವ ಆನಂದ್‌ಸಿಂಗ್ ಹಾಗೂ ಶಾಸಕರುಗಳಾದ ರಾಜುಗೌಡ ನಾಯಕ, ಬಸವನ ಗೌಡ ತುರ್ವಿಹಾಳ, ಎಸ್.ವಿ.ರಾಮಚಂದ್ರಪ್ಪ, ಈ. ತುಕಾರಾಂ, ಬಸವನಗೌಡ ದದ್ದಲ್ ಮತ್ತು ಇನ್ನಿತರೆ ಸಮಾಜದ ಮುಖಂಡರು ಉಪಸ್ಥಿತರಿದ್ದರು.

## ಆವರಗೊಳ್ಳದಲ್ಲಿ ಇಂದು ವೀರಭದ್ರೇಶ್ವರ ರಥೋತ್ಸವ

ಇಂದು ನಡೆಯುವ ವೀರಭದ್ರೇಶ್ವರ ಮಹಾಸ್ವಾಮಿ ರಥೋತ್ಸವ ಕಾರ್ಯಕ್ರಮದಲ್ಲಿ ಬೆಳಿಗ್ಗೆ 8 ಗಂಟೆಗೆ ಗಜಾರೋಹಣ ಉತ್ಸವ ಹಾಗೂ ಸಂಜೆ 6 ಗಂಟೆಗೆ ಶ್ರೀ ವೀರಭದ್ರೇಶ್ವರ ಮಹಾಸ್ವಾಮಿಯ ಮಹಾ ರಥೋತ್ಸವ ನಡೆಯುವುದು. ರಾತ್ರಿ ಉಯ್ಯಾಲೆ ಮಂಟಪದಲ್ಲಿ ಶ್ರೀ ಸ್ವಾಮಿ ಆಸೀನರಾಗುವರು. ನಂತರ ಭಕ್ತರಿಂದ ವೀರಗಾಸೆ ಸೇವೆ ನಡೆಯುವುದು.

ನಾಳೆ ಮಂಗಳವಾರ ಬೆಳಿಗ್ಗೆ 8 ಗಂಟೆಗೆ ಶ್ರೀ ಸ್ವಾಮಿಯ ಗುಗ್ಗಳ ಸೇವೆ, ಅಂದು ರಾತ್ರಿ 10 ಗಂಟೆಗೆ ಓಕಳಿ ಸೇವೆ ಮತ್ತು ಗಂಗಾ ಪೂಜೆ, ನಂತರ ಉಯ್ಯಾಲೆ ಮಂಟಪದಲ್ಲಿ ಶ್ರೀ ಸ್ವಾಮಿಯು ಆಸೀನರಾಗುವರು.

ದಿನಾಂಕ 23 ರ ಬುಧವಾರ ಬೆಳಿಗ್ಗೆ 8 ಗಂಟೆಗೆ ಬಿರುದಾವಳಿಗಳೊಂದಿಗೆ ಉಯ್ಯಾಲೆ ಮಂಟಪದಿಂದ ಸ್ವಾಮಿಯ ಗುಗ್ಗಳದೊಂದಿಗೆ ಶ್ರೀ ರೇವಣಸಿದ್ದೇಶ್ವರ, ಶ್ರೀ ಬೀರಲಿಂಗೇಶ್ವರ ಸ್ವಾಮಿಗಳೊಂದಿಗೆ ದೇವಸ್ಥಾನಕ್ಕೆ ಬಿಜಯಂಗೈಯ್ಯುವುದು. ದಿನಾಂಕ 24 ರ ಗುರುವಾರ ಕಂಕಣ ವಿಸರ್ಜನೆ ನಡೆಯುವುದು.

# ಗ್ರಾಮ ದೇವತೆ ಹಬ್ಬದ ಯಶಸ್ಸಿಗೆ ಮುತುವರ್ಜಿ ವಹಿಸಿ



**ಹರಿಹರ : ಸಿದ್ಧತಾ ಸಭೆಯಲ್ಲಿ ಶಾಸಕ ರಾಮಪ್ಪ ನಿರ್ದೇಶನ**

ಹರಿಹರ, ಫೆ.20- ಗ್ರಾಮ ದೇವತೆ ಊರಮ್ಮ ದೇವಿ ಜಾತ್ರೆ ಸಮಯದಲ್ಲಿ ಕುಡಿಯುವ ನೀರು, ವಿದ್ಯುತ್, ಸ್ವಚ್ಛತೆ, ಪೊಲೀಸ್ ಭದ್ರತೆ ಸೇರಿದಂತೆ ಯಾವುದೇ ರೀತಿಯ ತೊಂದರೆಗಳು ಆಗದಂತೆ ಮುತುವರ್ಜಿಯಿಂದ ಕೆಲಸ ಮಾಡಬೇಕು ಎಂದು ಶಾಸಕ ಎಸ್. ರಾಮಪ್ಪ ನಿರ್ದೇಶಿಸಿದರು.

ನಗರಸಭೆ ಸಭಾಂಗಣದಲ್ಲಿ ದೇವಿಯ ಹಬ್ಬದ ಪೂರ್ವಸಿದ್ಧತಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಜಾತ್ರೆಗೆ ನಾಡಿನ ವಿವಿಧ ಭಾಗಗಳಿಂದ ಲಕ್ಷಾಂತರ ಜನರು ಆಗಮಿಸುವುದರಿಂದ ಸ್ವಲ್ಪಮಟ್ಟಿಗೆ ವ್ಯತ್ಯಾಸಗಳು ಆದರೂ, ಅದರಿಂದ ನಗರಕ್ಕೆ ಕೆಟ್ಟ ಹೆಸರು ಬರುವ ಸಾಧ್ಯತೆ ಇರುತ್ತದೆ. ಹಾಗಾಗಿ ಈ ಹಬ್ಬದ ಸಮಯದಲ್ಲಿ ವಿದ್ಯುತ್, ಪೊಲೀಸ್ ಮತ್ತು ನಗರಸಭೆ ಜವಾಬ್ದಾರಿ ಹೆಚ್ಚಿನದಾಗಿದ್ದು, ಮುತುವರ್ಜಿಯಿಂದ ನಿಭಾಯಿಸಬೇಕು ಎಂದು ಮನವಿ ಮಾಡಿದರು.

ಜಾತ್ರೆಯ ಪ್ರಯುಕ್ತ ಉತ್ಸವ ಸಮಿತಿ ಆಯೋಜಿಸುವ ಮನೋರಂಜನೆ ಕಾರ್ಯಕ್ರಮ, ಕುಸ್ತಿ, ಟಗರಿನ ಕಾಳಗ, ಎತ್ತಿನ ಬಂಡೆ ಸ್ಪರ್ಧೆ, ಬೆಲ್ಲದ ಬಂಡಿ ಓಟದ ಸ್ಪರ್ಧೆ ಸೇರಿದಂತೆ ವಿವಿಧ ಸ್ಪರ್ಧೆಗಳಲ್ಲಿ ನಗರದವರಿಗೆ ಹೆಚ್ಚಿನ ಪ್ರೋತ್ಸಾಹ ಇರಬೇಕು. ಚರಗ ಹೋಗುವ ಮಾರ್ಗದಲ್ಲಿ ಗಿಡಗಳನ್ನು ತೆರವುಗೊಳಿಸಿ ಮತ್ತು ರಸ್ತೆ ದುರಸ್ತಿ ಪಡಿಸಬೇಕು. ಚೌಕಿ ಮನೆ ಹತ್ತಿರದಲ್ಲಿ ಮಹಿಳೆಯರಿಗೆ ಸಮವಸ್ತ್ರವನ್ನು ಬದಲಿಸಲು ಮೊಬೈಲ್ ಕೊಠಡಿ ನಿರ್ಮಾಣ ಮಾಡಬೇಕು, ಒಟ್ಟಾರೆಯಾಗಿ ಸಾರ್ವಜನಿಕರಿಗೆ ಮತ್ತು ಹೊರಗಡೆಯಿಂದ ಬಂದಂತಹ ಭಕ್ತರಿಗೆ ಯಾವುದೇ ರೀತಿಯ ತೊಂದರೆಗಳು ಬರದಂತೆ ನೋಡಿಕೊಳ್ಳುವುದು ವಿವಿಧ ಇಲಾಖೆಗಳ ಕರ್ತವ್ಯವಾಗಿದೆ ಎಂದರು.

ಜಿಲ್ಲಾ ಬಿಜೆಪಿ ಅಧ್ಯಕ್ಷ ವೀರೇಶ್ ಹನಗವಾಡಿ ಮಾತನಾಡಿ, ಹಬ್ಬದ ಸಮಯದಲ್ಲಿ ವಿದ್ಯುತ್, ಕುಡಿಯುವ ನೀರು, ಪೊಲೀಸ್ ಭದ್ರತೆ ಚೆನ್ನಾಗಿದ್ದರೆ, ಹಬ್ಬವು ಶಾಂತಿಯುತವಾಗಿ ನಡೆಯುತ್ತದೆ ಎಂದು ಹೇಳಿದರು.

ನಗರಸಭೆ ಸದಸ್ಯ ಶಂಕರ್ ಖಟಾವ್ಕರ್ ಮಾತನಾಡಿ, ನಗರಸಭೆ ಹಾಗೂ ಎಲ್ಲಾ ಇಲಾಖೆಯ ಅಧಿಕಾರಿಗಳು ಜವಾಬ್ದಾರಿಯಿಂದ ಕರ್ತವ್ಯ ನಿರ್ವಹಿಸಲು ಮುಂದಾಗಬೇಕೆಂದರು.

ಪೌರಾಯುಕ್ತರಾದ ಎಸ್.ಲಕ್ಷ್ಮಿ ಮಾತನಾಡಿ, ಹಬ್ಬದ ಸಮಯದಲ್ಲಿ ಸಾರ್ವಜನಿಕರಿಗೆ ಯಾವುದೇ ರೀತಿಯ ತೊಂದರೆಗಳು ಬರದಂತೆ ನಗರಸಭೆಯ ವತಿಯಿಂದ ನೋಡಿಕೊಳ್ಳುವುದಾಗಿ ಭರವಸೆ ನೀಡಿದರು.

ಬೆಸ್ಕಾಂ ಎಇಇ ಲಕ್ಷ್ಮಪ್ಪ ಮಾರ್ಕಂಡೇಯ ಮಾತನಾಡಿ, ವಿದ್ಯುತ್ ಪೂರೈಕೆ ಮಾಡುವುದಕ್ಕೆ ಎಲ್ಲಾ ರೀತಿಯ ಸಿದ್ದತೆ ಮಾಡಿಕೊಳ್ಳಲಾಗುತ್ತದೆ. ಆದರೆ, ಲೋಡಿಂಗ್ ಸಾಮರ್ಥ್ಯವು ಹೆಚ್ಚಾದ ಸಮಯದಲ್ಲಿ ಮೇನ್ ಲೈನ್ ನಲ್ಲಿ ವಿದ್ಯುತ್ ಕಟ್ ಆಗುವ ಸಂಭವ ಹೆಚ್ಚು ಇರುತ್ತದೆ. ಆ ಸಮಯದಲ್ಲಿ ಅದನ್ನು ಸರಿ ಪಡಿಸುವುದಕ್ಕೆ ಸುಮಾರು ಒಂದು ಗಂಟೆ ಅವಧಿ ಬೇಕಾಗುತ್ತದೆ. ಅದೊಂದು ಸಮಸ್ಯೆ ಬಿಟ್ಟರೆ ಇಲಾಖೆಯಲ್ಲಿ ಯಾವುದೇ ಸಮಸ್ಯೆ ಇರುವುದಿಲ್ಲ ಎಂದು ಹೇಳಿದರು.

ಉತ್ಸವ ಸಮಿತಿ ಅಧ್ಯಕ್ಷ ಕೆ. ಅಣ್ಣಪ್ಪ ಪೈಲ್ವಾನ್ ಮಾತನಾಡಿ, ಅಧಿಕಾರಿಗಳು ಹಬ್ಬಕ್ಕೆ ಚ್ಯುತಿ ಬರದ ರೀತಿಯಲ್ಲಿ ಉತ್ತಮವಾಗಿ ಸ್ಪಂದಿಸುವ ಕೆಲಸ ಮಾಡಬೇಕು ಎಂದು ಹೇಳಿದರು.

ನಗರಸಭೆ ಸದಸ್ಯ ಜಂಬಣ್ಣ ಗುತ್ತೂರು ಮಾತನಾಡಿ, ಹಬ್ಬದ ಸಮಯದಲ್ಲಿ ಕೇವಲ ನಗರಕ್ಕೆ ಮಾತ್ರ ವಿದ್ಯುತ್ ಅಲಂಕಾರ ಮಾಡದೇ, ನಗರಕ್ಕೆ ಹೊಂದಿಕೊಂಡಿರುವ ಬಡಾವಣೆಗಳಲ್ಲೂ ವಿದ್ಯುತ್ ಅಲಂಕಾರ ಮಾಡಬೇಕು ಎಂದು ಹೇಳಿದರು.

ಸುರೇಶ್ ಚಂದಪೂರ್, ಜಗದೀಶ್ ಚೂರಿ, ನಗರಸಭೆ ಉಪಾಧ್ಯಕ್ಷ ಬಾಬುಲಾಲ್, ಸದಸ್ಯೆ ನಾಗರತ್ನ, ನಗರಸಭೆ ಮಾಜಿ ಅಧ್ಯಕ್ಷ ಬಿ. ರೇವಣಸಿದ್ದಪ್ಪ, ಪತ್ರಕರ್ತರಾದ ಎಂ. ಚಿದಾನಂದ, ಆರ್. ಮಂಜುನಾಥ್, ಹೆಚ್. ಸುಧಾಕರ್, ಉತ್ಸವ ಸಮಿತಿಯ ಶೇರಾಪುರ ರಾಜಪ್ಪ, ಗಿರೀಶ್ ಗೌಡ್ರು, ಮಲ್ಲೇಶಪ್ಪ, ರಮೇಶ್ ಮಾನೆ, ದುರುಗೋಜಿ ಮೋಹನ್, ರಾಘು ಚೌಗಲೆ, ಬೆಳಕೇರಿ ರಾಜಣ್ಣ ಹಾಗು ಇತರರು ಹಬ್ಬದ ಯಶಸ್ವಿಗೆ ಉತ್ತಮ ಸಲಹೆಗಳನ್ನು ನೀಡಿದರು.

ಈ ಸಂದರ್ಭದಲ್ಲಿ ನಗರಸಭೆ ಅಧ್ಯಕ್ಷೆ ರತ್ನ ಡಿ. ಉಜ್ಜೇಶ್, ಸದಸ್ಯರಾದ ಉಷಾ ಮಂಜುನಾಥ್, ಕೆ.ಜಿ. ಸಿದ್ದೇಶ್, ದಿನೇಶ್ ಬಾಬು, ವಿಜಯಕುಮಾರ್, ಮಾಜೇನಹಳ್ಳಿ ಗೌಡ್ರು ಚನ್ನಬಸಪ್ಪ, ಕಸಬಾ ಗೌಡ್ರು ಲಿಂಗರಾಜ್ ಪಾಟೀಲ್, ಮಾಜೇನಹಳ್ಳಿ ಬಣಕಾರ ಆಂಜನೇಯ, ಕಸಬಾ ಬಣಕಾರ ಸಿದ್ದಪ್ಪ, ಶಾನಭೋಗ್ ಗಿರೀಶ್, ಉತ್ಸವ ಸಮಿತಿಯ ಕಾರ್ಯದರ್ಶಿ ಬೆಣ್ಣೆ ರೇವಣಸಿದ್ದಪ್ಪ, ಸಹ ಕಾರ್ಯದರ್ಶಿ ಪಾಲಾಕ್ಷಪ್ಪ, ಮುಖಂಡರಾದ ಕೆ.ಬಿ. ರಾಜಶೇಖರ್, ಗೌಡ್ರು ಪುಟ್ಟಪ್ಪ, ವಕೀಲರ ನಾಗರಾಜ್, ಸುರೇಶ್ ಚಂದಾಪೂರ್, ಜಗದೀಶ್ ಚೂರಿ, ಗೀರಿಶ್ ಗೌಡ್ರು, ನಾಗರಾಜ್ ಮೂಗಪ್ಪರ, ಡಿ. ಸಿದ್ದೇಶ್, ಅಶೋಕ, ಸಣ್ಣಗೌಡ್ರು, ದಾದಾ ಪೀರ್, ಜಾಕೀರ್, ಹರಪನಹಳ್ಳಿ ಹನುಮಂತಪ್ಪ, ಬೆಣ್ಣೆ ಸಿದ್ದೇಶ್, ವೇದಮೂರ್ತಿ, ಅರ್ಚಕ ನಾಗರಾಜ್, ಪತ್ರಕರ್ತ ಮಂಜುನಾಥ್ ಪೂಜಾರ್, ನಗರಸಭೆ ತಿಪ್ಪೇಸ್ವಾಮಿ, ಮಹಾಂತೇಶ್ ಭಂಡಾರಿ ಹಾಗು ಇತರರು ಹಾಜರಿದ್ದರು.

# ಚುನಾವಣೆಯಲ್ಲಿ ಗೆಲುವಿನ ಬಯಕೆ ಅನಿವಾರ್ಯ

### ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಹಾಗೂ ಪದಾಧಿಕಾರಿಗಳ ಚುನಾವಣಾ ಪ್ರಚಾರ ಸಭೆ ಉದ್ಘಾಟಿಸಿದ 'ಜನತಾವಾಣಿ' ಸಂಪಾದಕ ಎಂ.ಎಸ್. ವಿಕಾಸ್



ದಾವಣಗೆರೆ, ಫೆ. 20- ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಹಾಗೂ ಪದಾಧಿಕಾರಿಗಳ ಚುನಾವಣಾ ಪ್ರಚಾರ ಸಭೆಯನ್ನು ಶನಿವಾರ ಸಂಜೆ 'ಜನತಾವಾಣಿ' ಕಚೇರಿಯಲ್ಲಿ ಸಂಪಾದಕ ಎಂ.ಎಸ್. ವಿಕಾಸ್ ಉದ್ಘಾಟಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಅವರು, ಪ್ರಜಾಪ್ರಭುತ್ವದಲ್ಲಿ ಚುನಾವಣೆಯನ್ನು ಒಪ್ಪಿಕೊಂಡ ಪತ್ರಕರ್ತರುಗಳಾದ ನಾವುಗಳು, ಚುನಾವಣೆ ಅನಿವಾರ್ಯವಾದಾಗ ಗೆಲುವು ಬಯಸುವುದೂ ಅನಿವಾರ್ಯ ಎಂದರು.

ಚುನಾವಣೆ ಕುರಿತು ಮಹಾಭಾರತದ ಕೆಲ ದೃಷ್ಟಾಂತಗಳ ಮೂಲಕ ವಿಶ್ಲೇಷಿಸಿದ ಅವರು, ಶಾಂತಿಯುತ ಚುನಾವಣೆ ನಡೆಸುವಂತೆ ಸಲಹೆ ನೀಡಿದರು.

ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಿರುವ ಇ.ಎಂ. ಮಂಜುನಾಥ ಹಾಗೂ ಕೆ.ಚಂದ್ರಣ್ಣ, ವೀರಪ್ಪ ಬಾವಿ ಇವರ ತಂಡವು ಸಮರ್ಥವಾಗಿದೆ. ಈ ತಂಡವನ್ನು ಗೆಲ್ಲಿಸುವುದರ ಮೂಲಕ ಪುನಃ ಸಂಘದ ಧ್ಯೇಯೋದ್ದೇಶಗಳನ್ನು ಸ್ಥಾಪಿಸಿ ಪತ್ರಕರ್ತರ ಸಂಘದ ಮೌಲ್ಯಗಳನ್ನು ಹೆಚ್ಚಿಸಬೇಕಿದೆ ಎಂದರು.

ಹಿರಿಯ ಪತ್ರಕರ್ತರೂ, ವ್ಯಂಗ್ಯ ಚಿತ್ರಕಾರರೂ ಆದ ಹೆಚ್.ಬಿ. ಮಂಜುನಾಥ್ ಮಾತನಾಡಿ, ಪತ್ರಕರ್ತರ ಸಂಘದ ಚುನಾವಣೆಯಲ್ಲಿ ಅನುಭವ ಇರುವವರು ಈ ಗುಂಪಿನಲ್ಲಿದ್ದು, ಎಲ್ಲಾ ರೀತಿಯಿಂದಲೂ ಸಮರ್ಥರಾಗಿದ್ದಾರೆ. ಸಮರ್ಥರಿಗೆ ಈ ಸ್ಥಾನಗಳು ದೊರೆಯಬೇಕೆಂದು ಆಶಯ ವ್ಯಕ್ತಪಡಿಸಿದರು.

> **ತಿಳಿಯದೇ ಹೋಗಿದ್ದೆ, ತಿಳಿದು ಬಂದಿರುವೆ**
>
> **ಬೆಳಿಗ್ಗೆ ಪತ್ರಕರ್ತರ ಸಂಘದ ಚುನಾವಣೆಯ ಮತ್ತೊಂದು ತಂಡ ಕರೆದಿತ್ತು. ವಿಷಯ ಏನೆಂದು ಆಗ ತಿಳಿಯದೇ ಡಿ.ವಿ. ಗುಂಡಪ್ಪನವರ ಫೋಟೋಕ್ಕೆ ಹಾರ ಹಾಕಬೇಕೆಂದು ಹೋಗಿದ್ದೆ. ಅಲ್ಲಿಯೂ ಇದೇ ಪ್ರಚಾರ ಸಭೆ ಏರ್ಪಟ್ಟಿತ್ತು.**
> **ಆದರೆ, ಸಂಜೆ ಇಲ್ಲಿನ ಸಭೆ ಏನೆಂಬುದು ತಿಳಿದು ಬಂದಿರುವೆ. ಇ.ಎಂ. ಮಂಜುನಾಥ ಅವರ ತಂಡದ ಚುನಾವಣಾ ಪ್ರಚಾರ ಸಭೆಯಲ್ಲಿ ಭಾಗವಹಿಸಿದ್ದೇನೆ. ನನ್ನದು ಮಹಾಭಾರತದ ವಿಧುರನ ಸ್ಥಿತಿಯಾಗಿದೆ. ಅರ್ಹರು, ಸಮರ್ಥರು ಗೆಲ್ಲಲೇಬೇಕೆಂಬುದು ಧರ್ಮದ ಸಾರವಾಗಿದೆ ಎಂದು ಹೆಚ್.ಬಿ. ಮಂಜುನಾಥ್ ವಿಶ್ಲೇಷಿಸಿದ್ದು ವಿಶೇಷವಾಗಿತ್ತು.**

ಸಭೆಯ ಅಧ್ಯಕ್ಷತೆ ವಹಿಸಿದ್ದ ಹಿರಿಯ ಪತ್ರಕರ್ತ ವೀರಪ್ಪ ಎಂ.ಬಾವಿ ಮಾತನಾಡಿ, ರಾಜ್ಯ ಹಾಗೂ ಕೇಂದ್ರ ಸರ್ಕಾರದಿಂದ ಮಾನ್ಯತೆ ಪಡೆದಿರುವ ಸಂಘದಲ್ಲಿ ಜಿಲ್ಲಾ ಸಂಘ ಅನೇಕ ರಚನಾತ್ಮಕ ಕಾರ್ಯಗಳನ್ನು ನಡೆಸಿದೆ. ಕೋವಿಡ್ ಸಂದರ್ಭಗಳಲ್ಲಿ ನೊಂದ ಪತ್ರಕರ್ತರಿಗೆ ಕಿಟ್ ಹಾಗೂ ಆಹಾರದ ಕಿಟ್‌ಗಳನ್ನು ಕೊಡಿಸುವಲ್ಲಿ ಸಫಲವಾಗಿದೆ.

ಸಂಘದ ಒತ್ತಾಯದ ಮೇಲೆ ಮಹಾನಗರ ಪಾಲಿಕೆಯು ಜಿಲ್ಲಾ ಪತ್ರಕರ್ತರ ಸಂಘದ ಕ್ಷೇಮಾಭಿವೃದ್ಧಿ ಸಂಘಕ್ಕೆ 10 ಲಕ್ಷ ರೂ.ಗಳ ಠೇವಣಿಯನ್ನು ಕಾಯ್ದಿರಿಸಿದೆ ಎಂದು ಹೇಳಿದರು.

ಚುನಾವಣೆ ಅಧ್ಯಕ್ಷ ಸ್ಥಾನದ ಅಭ್ಯರ್ಥಿ ಇ.ಎಂ. ಮಂಜುನಾಥ್, ನೆರೆದಿದ್ದ ಎಲ್ಲಾ ಪತ್ರಕರ್ತರಿಗೂ ತಮ್ಮ ತಂಡವನ್ನು ಗೆಲ್ಲಿಸುವಂತೆ ಮನವಿ ಮಾಡಿದರು.

ಹಿರಿಯ ಪತ್ರಕರ್ತರುಗಳಾದ ಕೆ.ಚಂದ್ರಣ್ಣ, ಹರಿಹರದ ವಾಸುದೇವ್, ಎಸ್.ಎನ್. ಬಾಲಾಜಿ, ಜೆ.ಎಸ್. ವೀರೇಶ್, ಆರ್.ಎಸ್. ತಿಪ್ಪೇಸ್ವಾಮಿ, ಬಿ.ಎಸ್. ಮುದ್ದಯ್ಯ, ಕಾರೀಖ್ ನಕಾಶ್, ಬಿ. ರುದ್ರಪ್ಪ, ಎನ್.ಕೃಷ್ಣೋಜಿರಾವ್, ಎ.ಡಿ. ಪ್ರಕಾಶ್, ಇಂದೂಧರ ನಿಶಾನಿಮಠ, ಸಿ.ಹರೀಶ್, ಸಿ.ಸತೀಶ್, ಮುದ್ದಯ್ಯ, ಅನಿಲ್ ಕುಮಾರ್, ಹಾಲಿವಾಣ ಹನುಮಂತಪ್ಪ, ಶ್ರೀಕುಮಾರ ಆನೆಕೊಂಡ, ನಾಗರಾಜ್, ಬಸವರಾಜ್ ಮಟ್ಟಿ, ಎಸ್.ಎಂ. ಮಂಜುನಾಳ್ ಜಗದೀಶ್ ಇತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಮಾಗನೂರು ಮಂಜಪ್ಪ ಪ್ರಾಸ್ತಾವಿಕವಾಗಿ ಮಾತನಾಡಿದರು. ಹೆಚ್.ಎಂ.ಪಿ. ಕುಮಾರ್ ಸ್ವಾಗತಿಸಿದರು. ಹೊನ್ನಾಳಿಯ ಹೆಚ್.ಸಿ. ಮೃತ್ಯುಂಜಯ ಪಾಟೀಲ್ ನಿರೂಪಿಸಿದರು. ಹರಿಹರ ಚಿದಾನಂದ ಎಂ. ಕಂಚಿಕೆರೆ ವಂದಿಸಿದರು.

## ಪತ್ರಕರ್ತರ ಸಂಘದ ಚುನಾವಣೆ : ಪ್ರಚಾರ ಕಛೇರಿ ಉದ್ಘಾಟನೆ



ದಾವಣಗೆರೆ, ಫೆ.20- ಕರ್ನಾಟಕ ಕಾರ್ಯನಿರತ ಪತ್ರಕರ್ತರ ಜಿಲ್ಲಾ ಘಟಕಕ್ಕೆ ನಡೆಯುವ ಚುನಾವಣೆಯ ಆರ್. ರವಿ ನೇತೃತ್ವದ ತಂಡದ ಪ್ರಚಾರ ಕಚೇರಿಯನ್ನು ಶನಿವಾರ ಉದ್ಘಾಟಿಸಲಾಯಿತು.

ಹಿರಿಯ ಪತ್ರಕರ್ತ ಹೆಚ್.ಬಿ. ಮಂಜುನಾಥ್ ಚುನಾವಣಾ ಪ್ರಚಾರ ಕಚೇರಿಯನ್ನು ಕಾರ್ಯನಿರತ ಪತ್ರಕರ್ತರ ಸಂಘದ ಸಂಸ್ಥಾಪಕ ಅಧ್ಯಕ್ಷರಾಗಿದ್ದ ದಿ. ಡಿ.ವಿ. ಗುಂಡಪ್ಪ ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸುವುದರ ಮೂಲಕ ಉದ್ಘಾಟಿಸಿದರು.

ಈ ವೇಳೆ ಮಂಜುನಾಥ್ ಮಾತನಾಡಿ, ಡಿ.ವಿ. ಗುಂಡಪ್ಪ ಪ್ರಾಮಾಣಿಕ ಮತ್ತು ನಿಷ್ಠೂರ ಪತ್ರಕರ್ತರಾಗಿದ್ದರು. ಮೈಸೂರು ಸಂಸ್ಥಾನದ ದಿವಾನರಾಗಿದ್ದ ಸರ್ ಮಿರ್ಜಾ ಇಸ್ಮಾಯಿಲ್, ಸರ್ ಎಂ.ವಿಶ್ವೇಶ್ವರಯ್ಯ ಅವರ ಒಡನಾಡಿಗಳಾಗಿದ್ದರು. ಅವರು ಪತ್ರಿಕಾ ರಂಗದಲ್ಲಿ ಸಲ್ಲಿಸಿದ ಸೇವೆ ಇಂದಿನ ಯುವಪೀಳಿಗೆಗೆ ದಾರಿದೀಪವಾಗಿದೆ. ಅಂತಹ ವ್ಯಕ್ತಿಯ ಭಾವಚಿತ್ರ ಇಟ್ಟು ಚುನಾವಣಾ ಪ್ರಚಾರ ಕಚೇರಿ ಆರಂಭ ಮಾಡುತ್ತಿರುವುದು ಸಂತೋಷಕರ ಸಂಗತಿ ಎಂದರು.

ಪತ್ರಕರ್ತರಾದ ಬಸವರಾಜ ದೊಡ್ಡಮ್ಮನಿ ಮಾತನಾಡಿ, ಸಂಘ-ಸಂಸ್ಥೆ ನಿಂತ ನೀರಾಗಬಾರದು. ಪ್ರಜಾಪ್ರಭುತ್ವದಲ್ಲಿ ಎಲ್ಲರಿಗೂ ಸರಿಸಮಾನ ಅವಕಾಶ ದೊರಕಬೇಕಿದೆ ಎಂದು ಹೇಳಿದರು.

ಹಿರಿಯ ಪತ್ರಕರ್ತರಾದ ನಾಗರಾಜ್ ಬಡದಾಳ್, ಬಿ. ವಾಸುದೇವ್, ಸುರೇಶ್ ಕುಣೆಬೆಳಕೆರೆ, ಎಸ್.ಕೆ. ಒಡೆಯರ್, ಜಿ.ಎನ್. ನಿಂಗೋಜಿರಾವ್, ಎ.ಫಕೃದ್ದೀನ್, ಬದರೀನಾಥ, ಹೆಚ್.ಎನ್. ಪ್ರಕಾಶ್, ಭಾರತಿ, ಕೆ.ಸಿ. ಮಂಜುನಾಥ, ಪುನೀತ್, ರಮೇಶ್, ಮಹೇಶ್, ವರದರಾಜ್, ಮಧು ನಾಗರಾಜ್, ಬಸವರಾಜ್ ನವಣಿ, ಕೆ.ಜಿ. ಶಿವಕುಮಾರ್, ವೇದಮೂರ್ತಿ, ಎ.ವಿ. ರುದ್ರಮ್ಮ ಮತ್ತಿತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

## 'ಸಾವಯವ ಸಿರಿ' ಯೋಜನೆಗೆ ಅರ್ಜಿ

ದಾವಣಗೆರೆ, ಫೆ.20- ಜನರಿಗೆ ಆರೋಗ್ಯಕರ ಹಾಗೂ ರಾಸಾಯನಿಕ ಮುಕ್ತ ಕೃಷಿ ಮತ್ತು ತೋಟಗಾರಿಕಾ ಉತ್ಪನ್ನಗಳನ್ನು ದೊರಕಿಸಲು ರಾಜ್ಯದಲ್ಲಿ ಸಾವಯವ ಕೃಷಿಯನ್ನು ಉತ್ತೇಜಿಸಿ, ಸಾವಯವ ಉತ್ಪನ್ನಗಳು ಹಾಗೂ ಸಿರಿಧಾನ್ಯಗಳನ್ನು ವೈಜ್ಞಾನಿಕವಾಗಿ ಮಾರಾಟ ಮಾಡುವುದರ ಮೂಲಕ ರೈತರಿಗೆ ಗರಿಷ್ಠ ಬೆಲೆ ಒದಗಿಸುವ ಉದ್ದೇಶದಿಂದ ರಾಜ್ಯ ಸರ್ಕಾರವು 'ಸಾವಯವ ಸಿರಿ' ಯೋಜನೆಯನ್ನು ಅನುಷ್ಠಾನಗೊಳಿಸಲು ಉದ್ದೇಶಿಸಿದೆ.

ಜಿಲ್ಲಾ ಮಟ್ಟದಲ್ಲಿ ಕೃಷಿ ಇಲಾಖೆಯ ಸಹಯೋಗದೊಂದಿಗೆ ಯೋಜನೆಯನ್ನು ಅನುಷ್ಠಾನ ಮಾಡಲು ರಾಜ್ಯದಲ್ಲಿ ಸಾವಯವ ಕೃಷಿಯ ಉತ್ತೇಜನದಲ್ಲಿ ಈಗಾಗಲೇ ಕಾರ್ಯ ನಿರ್ವಹಿಸುತ್ತಿರುವ ನೋಂದಾಯಿತ ಸಾಮಾಜಿಕ ಸಂಸ್ಥೆಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

ಆಸಕ್ತಿ ಇರುವ ಸಾಮಾಜಿಕ ಸಂಸ್ಥೆಗಳು ಅರ್ಜಿ, ಪ್ರಸ್ತಾವನೆಗಳನ್ನು ಇದೇ ದಿನಾಂಕ 24 ರೊಳಗಾಗಿ ಜಿಲ್ಲಾ ಜಂಟಿ ಕೃಷಿ ನಿರ್ದೇಶಕರ ಕಚೇರಿಗೆ ಸಲ್ಲಿಸುವುದು. ಹೆಚ್ಚಿನ ಮಾಹಿತಿಗಾಗಿ ಸಹಾಯಕ ಕೃಷಿ ನಿರ್ದೇಶಕರು ,ಮೊ.ಸಂ: 8277931105 ಸಂಪರ್ಕಿಸಲು ಕೋರಿದೆ.

## ನಗರಕ್ಕೆ ಗ್ರಾಮ ಸಡಕ್ ಯೋಜನೆ ಗುಣ ನಿಯಂತ್ರಣ ಅಧಿಕಾರಿ ಆಗಮನ

ರಾಷ್ಟ್ರೀಯ ಗುಣ ನಿಯಂತ್ರಣ ಅಧಿಕಾರಿ ಸುನೀಲ್ ಕುಮಾರ್ ದಾವಣಗೆರೆ ವಿಭಾಗಕ್ಕೆ ಸಂಬಂಧಿಸಿದ ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆಯ ಹಂತ-3 ರ ಕಾಮಗಾರಿಗಳ ಪರಿವೀಕ್ಷಣೆಯನ್ನು 3 ದಿನಗಳಿಂದ ಮಾಡುತ್ತಿದ್ದಾರೆ.

ಸಾರ್ವಜನಿಕರು ಇಂದು ಬೆಳಗ್ಗೆ 10.30 ರಿಂದ 11.30 ರವರೆಗೆ, ಹೋಟೆಲ್ ಸಾಯಿ ಇಂಟರ್‌ನ್ಯಾಷನಲ್‌ನಲ್ಲಿ ನಿಯಂತ್ರಣಾಧಿಕಾರಿಗಳನ್ನು ಭೇಟಿ ಮಾಡಬಹುದು. ಯೋಜನಾ ವಿಭಾಗದ ಕಛೇರಿ ದೂರವಾಣಿ ನಂ 08192-296576 ಆಗಿರುತ್ತದೆ ಎಂದು ನಗರ ಯೋಜನಾ ವಿಭಾಗದ ಕಾರ್ಯಪಾಲಕ ಇಂಜಿನಿಯರ್ ತಿಳಿಸಿರುತ್ತಾರೆ.

## ನಗರಕ್ಕೆ ನಾಡಿದ್ದು ಸೈನಿಕ ಕಲ್ಯಾಣಾಧಿಕಾರಿ ಭೇಟಿ : ಕುಂದು - ಕೊರತೆ ಪರಿಶೀಲನೆ

ದಾವಣಗೆರೆ, ಫೆ.20- ಶಿವಮೊಗ್ಗದಿಂದ ಸೈನಿಕ ಕಲ್ಯಾಣಾಧಿಕಾರಿಗಳು ಇದೇ ದಿನಾಂಕ 24 ರಂದು ಬೆಳಿಗ್ಗೆ 11 ರಿಂದ ಮಧ್ಯಾಹ್ನ 1.30 ರವರೆಗೆ ಜಿಲ್ಲಾ ಮಾಜಿ ಯೋಧರ ವಿವಿಧೋದ್ದೇಶ ಸಂಘದ ಕಚೇರಿಯಲ್ಲಿ ಹಾಜರಿದ್ದು, ಜಿಲ್ಲೆಯಲ್ಲಿನ ಮಾಜಿ ಸೈನಿಕರ ಮತ್ತು ಅವರ ಅವಲಂಬಿತರ ಕುಂದು - ಕೊರತೆಗಳನ್ನು ಆಲಿಸಲಿದ್ದಾರೆ. ಜಿಲ್ಲೆಯ ಎಲ್ಲಾ ಮಾಜಿ ಸೈನಿಕರು ಮತ್ತು ಅವರ ಅವಲಂಬಿತರು ತಮ್ಮ ಕುಂದು ಕೊರತೆಗಳೇನಾದರೂ ಇದ್ದಲ್ಲಿ ಪರಿಹರಿಸಿಕೊಳ್ಳಬಹುದೆಂದು ಸೈನಿಕ ಕಲ್ಯಾಣ ಇಲಾಖೆ ಉಪ ನಿರ್ದೇಶಕರು ತಿಳಿಸಿದ್ದಾರೆ.

## ದೇವರಬೆಳಕೆರೆಯಲ್ಲಿ ಇಂದು ರಥೋತ್ಸವ

ಹರಿಹರ ತಾಲ್ಲೂಕಿನ ದೇವರ ಬೆಳಕೆರೆ ಗ್ರಾಮದಲ್ಲಿ ಇಂದು ಸಂಜೆ 4.30 ಕ್ಕೆ ಶ್ರೀ ಮೈಲಾರ ಲಿಂಗೇಶ್ವರ ಸ್ವಾಮಿಯ ಮಹಾ ರಥೋತ್ಸವ ನಡೆಯಲಿದೆ. ನಾಳೆ ಮಂಗಳವಾರ ಸಂಜೆ 4 ಕ್ಕೆ ಕಾಲಶಸ್ತ್ರ, ತ್ರಿಶೂಲ ಮತ್ತು ಸರಪಳಿ ಪವಾಡಗಳು ನಡೆಯುತ್ತವೆ. ಸಂಜೆ 5.30 ಕ್ಕೆ ಶ್ರೀ ಸ್ವಾಮಿಯ ಓಕುಳಿ ನಡೆಯಲಿದೆ.

## ಕಲಾವತಿಗೆ ಸಂತಾಪ

ದಾವಣಗೆರೆ, ಫೆ.20 - ಬಿ.ಜೆ ಪಿ ಮಾಜಿ ಮುಖಂಡ ಯಮ್ಮಿ ಸತೀಶ್ ರವರ ಧರ್ಮಪತ್ನಿ ಶ್ರೀಮತಿ ಕಲಾವತಿ ನಿಧನಕ್ಕೆ ಕರವೇ ಜಿಲ್ಲಾಧ್ಯಕ್ಷ ಎಂ.ಎಸ್. ರಾಮೇಗೌಡ ಸಂತಾಪ ಸೂಚಿಸಿದ್ದಾರೆ.

## ಕಾಣೆಯಾಗಿದ್ದಾರೆ



ದಾವಣಗೆರೆ ಬಾಷಾನಗರ ವಾಸಿ ದಾದಾಪೀರ್ ಖಾನ್ ತಂದೆ ಹಫೀಜ್ ಖಾನ್, ವಯಸ್ಸು 38 ವರ್ಷ ಇವರು ದಿನಾಂಕ 01.07.2020ರಂದು ಮನೆಯಿಂದ ಹೋದವರು ಇದುವರೆಗೂ ಮನೆಗೆ ಬಂದಿರುವುದಿಲ್ಲ. ಉರ್ದು ಹಾಗು ಕನ್ನಡ ಭಾಷೆ ಮಾತನಾಡುತ್ತಾರೆ. ಇವರನ್ನು ಯಾರಾದರು ನೋಡಿದಲ್ಲಿ ಆಜಾದ್ ನಗರ ಪೊಲೀಸ್ ಠಾಣೆಗಾಗಲೀ ಅಥವಾ ಈ ಕೆಳಗಿನ ಫೋನ್ ನಂಬರಿಗೆ ತಿಳಿಸಲು ಕೋರಿದೆ.

**99028 27806**
**99642 22124**

## ಮಹಿಳಾ ನಿರಾಶ್ರಿತರಿಗೆ ಅರ್ಜಿ ಆಹ್ವಾನ

ದಾವಣಗೆರೆ ವನಿತಾ ಸಮಾಜದ ಅಂಗ ಸಂಸ್ಥೆಯಾದ "**ಆಶ್ರಯ**" ಹಿರಿಯ ವನಿತೆಯರ ಆನಂದ ಧಾಮವು ನಿರಾಶ್ರಿತ ಮಹಿಳೆಯರು, ವಿಧವೆಯರು, ಅವಿವಾಹಿತರು, ಮಕ್ಕಳು ಇಲ್ಲದವರು, ಮಕ್ಕಳು ಇದ್ದು ನೋಡಿಕೊಳ್ಳದವರು ಹಾಗು ಅನಾಥರು, ಅಬಲೆಯರಿಗೆ ಆಸರೆ ನೀಡುತ್ತಾ ಬಂದಿದೆ.

ಈ ಆನಂದ ಧಾಮದಲ್ಲಿ ಕೆಲವೇ ಸ್ಥಾನಗಳು ತೆರವಾಗಿವೆ. ಆಸಕ್ತಿ ಇರುವ ಮಹಿಳೆಯರು ಅರ್ಜಿ ಸಲ್ಲಿಸಬಹುದಾಗಿದೆ. 60 ವರ್ಷ ಮೇಲ್ಪಟ್ಟವರಾಗಿರಬೇಕು, ತಕ್ಕಮಟ್ಟಿಗೆ ಆರೋಗ್ಯವಾಗಿದ್ದು ತಮ್ಮ ಕೆಲಸ ತಾವೇ ಮಾಡಿಕೊಳ್ಳಲು ಶಕ್ತರಾಗಿರಬೇಕು. ಸೇರಲು ಬಯಸುವವರು ಕೆಳಗಿನ ದೂರವಾಣಿ ಸಂಖ್ಯೆಗೆ ಸಂಪರ್ಕಿಸಿ

**94806 87273**
**98448 50414**

# ಬೆಳ್ಳಿ ಮಹೋತ್ಸವದಲ್ಲಿ ಕನಕ ಬ್ಯಾಂಕ್ 'ಕನಕ ಸಿರಿ' ಠೇವಣಿ ಪತ್ರ ಬಿಡುಗಡೆ



ದಾವಣಗೆರೆ, ಫೆ.20- ನಗರದ ಪ್ರತಿಷ್ಠಿತ ಸಹಕಾರಿ ಬ್ಯಾಂಕುಗಳಲ್ಲೊಂದಾದ ಕನಕ ಪಟ್ಟಣ ಸಹಕಾರಿ ಬ್ಯಾಂಕ್ ತನ್ನ ಸ್ಥಾಪನೆಯ 25ನೇ ವರ್ಷದ ಬೆಳ್ಳಿ ಮಹೋತ್ಸವದ ಸಂಭ್ರಮದಲ್ಲಿದೆ.

ಈ ಹಿನ್ನೆಲೆಯಲ್ಲಿ ಬೆಳ್ಳಿ ಹಬ್ಬದ ವರ್ಷವನ್ನು ಸವಿ ನೆನಪಿನಲ್ಲಿ ಉಳಿಸುವ ನಿಟ್ಟಿನಲ್ಲಿ 'ಕನಕ ಸಿರಿ' ಹೊಸ ಠೇವಣಿ ಪತ್ರ ಮತ್ತು ಬ್ಯಾಂಕಿನ ಲೋಗೋ ಹೊಂದಿರುವ 2022ನೇ ಸಾಲಿನ ದಿನಚರಿ (ಕ್ಯಾಲೆಂಡರ್) ಬಿಡುಗಡೆ ಮಾಡಲಾಗಿದೆ.

ಹಿರಿಯ ನ್ಯಾಯವಾದಿಯೂ ಆಗಿರುವ ಕನಕ ಬ್ಯಾಂಕಿನ ಅಧ್ಯಕ್ಷ ಲೋಕಿಕೆರೆ ಸಿದ್ದಪ್ಪ ಅವರ ಅಧ್ಯಕ್ಷತೆಯಲ್ಲಿ ಬ್ಯಾಂಕಿನ ಸಭಾಂಗಣದಲ್ಲಿ ಇಂದು ನಡೆದ ಸರಳ ಸಮಾರಂಭದಲ್ಲಿ 'ಕನಕ ಸಿರಿ' ಠೇವಣಿ ಪತ್ರ ಹಾಗೂ ಕ್ಯಾಲೆಂಡರ್ ಅನ್ನು ಗ್ರಾಹಕರ ಸೇವೆಗೆ ಸಮರ್ಪಿಸಲಾಯಿತು.

ಈ ಸಂದರ್ಭದಲ್ಲಿ ಮಾತನಾಡಿದ ಅಧ್ಯಕ್ಷ ಸಿದ್ದಪ್ಪ, ಸುದೀರ್ಘ 25 ವರ್ಷಗಳ ಕಾಲ ಕನಕ ಬ್ಯಾಂಕ್ ಮುನ್ನಡೆಯುವುದರ ಜೊತೆಗೆ ಅಭಿವೃದ್ಧಿ ಪಥದಲ್ಲಿ ಸಾಗುತ್ತಿರಲು ಕಾರಣರಾದ ಎಲ್ಲರ ಸೇವೆಯನ್ನು ಸ್ಮರಿಸಿ ಕೃತಜ್ಞತೆ ಸಲ್ಲಿಸಿದರು.

ಕನಕ ಬ್ಯಾಂಕ್ ಸಂಸ್ಥಾಪಕರು ಹೊತ್ತಿದ್ದ ಆಶಯಗಳನ್ನು ಈಡೇರಿಸುವುದರ ಮೂಲಕ ಬ್ಯಾಂಕ್ ಪ್ರಗತಿದಾಯಕವಾಗಿ ಕೊಂಡೊಯ್ಯುವುದರಲ್ಲಿ ಸದಸ್ಯರು - ಗ್ರಾಹಕರು - ಠೇವಣಿದಾರರ ಸಹಕಾರ - ಪ್ರೋತ್ಸಾಹ, ಸಿಬ್ಬಂದಿ ವರ್ಗದವರ ಶ್ರಮ, ಆಡಳಿತ ಮಂಡಳಿ ಸದಸ್ಯರ ಇಚ್ಛಾಶಕ್ತಿ ಕಾರಣವಾಗಿದೆ ಎಂದು ಸಿದ್ದಪ್ಪ ಮೆಚ್ಚುಗೆ ವ್ಯಕ್ತಪಡಿಸಿದರು.

ಉಪಾಧ್ಯಕ್ಷರಾದ ಶ್ರೀಮತಿ ಕೆ.ಜಿ. ತಾಯಮ್ಮ ಮಾತನಾಡಿ, ಬ್ಯಾಂಕಿನ ಶ್ರೇಯೋಭಿವೃದ್ಧಿಗೆ ಸಹಕರಿಸುತ್ತಿರುವ ಎಲ್ಲರಿಗೂ ಧನ್ಯವಾದ ಹೇಳಿದರು.

ನಿರ್ದೇಶಕರುಗಳಾದ ಪಿ. ರಾಜಕುಮಾರ್, ಹೆಚ್. ಜಿ. ಸಂಗಪ್ಪ, ಕೆ.ಆರ್. ಭರಮಪ್ಪ, ಕೆ.ಎನ್. ನೀಲಪ್ಪ, ಬಿ.ದಿಳ್ಳೆಪ್ಪ, ಪಿ. ಚೌಡಪ್ಪ, ಹೆಚ್.ಎಂ.ಗೋಣೆಪ್ಪ, ಎಸ್. ಸಂಗೇಗೌಡ, ಕೆ.ಪರಶುರಾಮ್, ಎಸ್.ಹೆಚ್. ಕಾಂತೇಶ್, ಟಿ.ಎನ್. ಪ್ರಕಾಶ್, ಶ್ರೀಮತಿ ಸುಧಾ, ವೃತ್ತಿಪರ ನಿರ್ದೇಶಕ ಆರ್. ಆನಂದ್, ವಿಶೇಷ ಆಹ್ವಾನಿತರಾದ ಕೆ.ರೇವಣಸಿದ್ದಪ್ಪ ಅವರುಗಳು ಕಾರ್ಯಕ್ರಮದ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಬ್ಯಾಂಕಿನ ವ್ಯವಸ್ಥಾಪಕ ಬಿ.ಎಲ್. ಗೌಡ ಕಾರ್ಯಕ್ರಮ ನಿರ್ವಹಿಸಿದರು. ಲೆಕ್ಕಾಧಿಕಾರಿ ದೇವಜ್ಜಿ ರಮೇಶ್ ಸ್ವಾಗತಿಸಿ, ವಂದಿಸಿದರು.

ಹಿರಿಯ ಸಹಾಯಕರಾದ ಶ್ರೀಮತಿ ಕೆ.ಎಸ್. ರೇಣುಕ, ಶ್ರೀಮತಿ ಬಿ.ಕೆ. ವಿಜಯ, ಸಹಾಯಕ ಲೆಕ್ಕಾಧಿಕಾರಿ ಶ್ರೀಮತಿ ಕೆ. ರೇಖಾ, ಕಿರಿಯ ಸಹಾಯಕರಾದ ಶ್ರೀಮತಿ ಬಿ.ಜೆ. ನೇತ್ರಾವತಿ, ಹೆಚ್. ಆರ್. ಉಮೇಶ್, ಹೆಚ್.ಎಸ್. ಪರಶುರಾಮ್, ಡಿ. ಹೆಚ್. ಮಾರುತಿ ಮತ್ತು ಇತರರು ಕಾರ್ಯಕ್ರಮದ ವಿವಿಧ ಹಂತಗಳಲ್ಲಿ ಕಾರ್ಯ ನಿರ್ವಹಿಸಿದರು.

# ಜಾನಪದ ಕಲೆ ಉಳಿಸಿ, ಬೆಳೆಸುವ ಕೆಲಸ ಸರ್ಕಾರಗಳದ್ದು

## ಹರಪನಹಳ್ಳಿ : ಅರಸೀಕೆರೆ ಕೋಲ ಶಾಂತೇಶ್ವರ ಮಠದ ಶ್ರೀ ಶಾಂತಲಿಂಗ ದೇಶಿಕೇಂದ್ರ ಸ್ವಾಮೀಜಿ



ಹರಪನಹಳ್ಳಿ, ಫೆ.20- ವ್ಯಕ್ತಿಯ ಅಧಿಕಾರ, ಸ್ವಪ್ರತಿಷ್ಠೆಯನ್ನು ನಿರ್ಮೂಲನೆ ಮಾಡಿ ಸಮಾಜದಲ್ಲಿ ಜ್ಞಾನಾರ್ಜನೆಯನ್ನು ಬಿತ್ತುವ ದೈವತ್ವವಾಗಿರುವ ಜಾನಪದ ಕಲೆ ಉಳಿಸಿ, ಬೆಳೆಸುವ ಕೆಲಸವನ್ನು ಸರ್ಕಾರಗಳು ಮಾಡಬೇಕಿದೆ ಎಂದು ಅರಸೀಕೆರೆ ಕೋಲ ಶಾಂತೇಶ್ವರ ಮಠದ ಶ್ರೀ ಶಾಂತಲಿಂಗ ದೇಶಿಕೇಂದ್ರ ಸ್ವಾಮೀಜಿ ಹೇಳಿದರು.

ತಾಲ್ಲೂಕಿನ ಅರಸಿಕೇರಿ ಗ್ರಾಮದ ಕೋಲ ಶಾಂತೇಶ್ವರ ಪದವಿ ಕಾಲೇಜಿನಲ್ಲಿ ಕಲ್ಯಾಣ ಕರ್ನಾಟಕ ಕಲಾವಿದರ ಒಕ್ಕೂಟದ ವತಿಯಿಂದ ನಡೆದ ಪದಾಧಿಕಾರಿಗಳ ಆಯ್ಕೆ ಹಾಗೂ ಗುರುತಿನ ಚೀಟಿ ವಿತರಣಾ ಕಾರ್ಯಕ್ರಮದ ಸಾನಿಧ್ಯ ವಹಿಸಿ ಮಾತನಾಡಿದರು.

ಸರ್ಕಾರದಿಂದ ಕಲಾವಿದರಿಗೆ ಸೂಕ್ತ ಮಾನ್ಯತೆ, ಪ್ರೋತ್ಸಾಹ ಸಿಗದಿರುವುದರಿಂದ ಕೌಟುಂಬಿಕವಾಗಿ ಬಳುವಳಿಯಾಗಿ ಸಿಗುತ್ತಿದ್ದ ಕಲೆ ನಶಿಸುವಂತಾಗಿದೆ. ಈ ದಿಸೆಯಲ್ಲಿ ಬುಡಬುಡಿಕೆ, ಎಣ್ಣೆ ಜೋಗಿ, ಪರ್ವತ ಮಲ್ಲಯ್ಯ, ಕೋಲೆ ಬಸವದಂತಹ ಕಲೆಗಳ ಸಂಖ್ಯೆ ಕಡಿಮೆಯಾಗುತ್ತಿದೆ. ಹೀಗೆ ಮುಂದುವರೆದರೆ ಭವಿಷ್ಯದಲ್ಲಿ ಜನಪದ ಸಾಹಿತ್ಯ ಅವನತಿಗೆ ತುತ್ತಾಗಬಹುದು ಎಂದು ಆತಂಕ ವ್ಯಕ್ತಪಡಿಸಿದರು.

ಕಲೆಗಾರರು ತಮ್ಮ ಮಕ್ಕಳಲ್ಲಿ ಸಾಹಿತ್ಯದ ಅಭಿರುಚಿ ಬೆಳೆಸದೇ, ಆಧುನಿಕ ಯುಗದಲ್ಲಿ ಹಣ ಸಂಪಾದನೆಗೆ ಇರುವ ದಾರಿಯನ್ನು ಹುಡುಕುವಂತಾಗಿದೆ. ಪೋಷಕರು ತಮ್ಮ ಮಕ್ಕಳಿಗೆ ತೊಟ್ಟಿಲಿನಲ್ಲಿ ಹಾಕಿ ಲಾಲಿ ಹಾಡುವ ಮೂಲಕ ಜಾನಪದ ಸಾಹಿತ್ಯದ ಬೀಜ ಬಿತ್ತನೆ ಮಾಡಲಾಗುತ್ತಿತ್ತು. ಆದರೆ ಇಂದು ಲಾಲಿ... ಲಾಲಿ... ಅನ್ನುವುದು ಬಿಟ್ಟರೆ ಏನು ಉಳಿದಿಲ್ಲ ಎಂದರು.

ಸಂಗೀತಕ್ಕೆ ವಿಶೇಷ ಶಕ್ತಿ ಇದೆ. ಸಕಲ ನೋವು, ದುಃಖಗಳನ್ನು ಮರೆಸುತ್ತದೆ. ಸಂಗೀತದ ಅರಿವೇ ಇಲ್ಲದಿರುವ ಕೂಸಿಗೂ ನಿದ್ದೆ ತರಿಸುವ ದೈವತ್ವದ ಶಕ್ತಿ ಸಂಗೀತಕ್ಕಿದೆ. ಗ್ರಾಮೀಣ ಜಾನಪದ ಕಲೆಗಳು ನಶಿಸುತ್ತಿದ್ದು, ಇಂತಹ ಕಲೆಗಳನ್ನು ಉಳಿಸಿ, ಬೆಳೆಸುವ ಅಗತ್ಯವಿದೆ ಎಂದು ಹೇಳಿದರು.

ವಿಜಯನಗರ ಜಿಲ್ಲಾಧ್ಯಕ್ಷ ರಮೇಶ್ ಹಂಚಿನಮನೆ ಮಾತನಾಡಿ, ಕಲಾವಿದರಿಗೆ ಸಿಗುವ ವಿಮೆ, ಮಾಸಾಶನ ಹಾಗೂ ನಾಟಕಗಳಿಗೆ ಹೆಚ್ಚಿನ ಪ್ರೋತ್ಸಾಹ ಧನ ನೀಡುವಂತೆ ಒತ್ತಾಯಿಸುವುದಾಗಿ ಹೇಳಿದರು.

ಕಾರ್ಯಕ್ರಮದಲ್ಲಿ ಕಲ್ಯಾಣ ಕರ್ನಾಟಕ ಕಲಾವಿದರ ಒಕ್ಕೂಟದ ತಾಲ್ಲೂಕು ಅಧ್ಯಕ್ಷರಾಗಿ ನಿಚ್ಚವ್ವನಹಳ್ಳಿ ಭೀಮಪ್ಪ, ಪ್ರಧಾನ ಕಾರ್ಯದರ್ಶಿ ಪಿ. ಕರಿಬಸಪ್ಪ ಅವರನ್ನು ನೇಮಕ ಮಾಡಲಾಯಿತು.

ಈ ಸಂದರ್ಭದಲ್ಲಿ ಒಕ್ಕೂಟದ ಹಗರಿಬೊಮ್ಮನಹಳ್ಳಿ ತಾಲ್ಲೂಕು ಅಧ್ಯಕ್ಷ ಉಮಾ ಶಂಕರ್, ಹಡಗಲಿ ತಾಲ್ಲೂಕು ಅಧ್ಯಕ್ಷ ಬನ್ನೆಪ್ಪ ಉತ್ತಂಗಿ, ರಂಗ ಕಲಾವಿದೆ ನಾಗರತ್ನ ಸೋಗಿ, ಮುಖಂಡರಾದ ಮೋತಿ ಮಾರುತಿ, ಮಲ್ಲಿಕಾರ್ಜುನ್ ಗೌಡ, ನಾಗರಾಜ ತಿಮ್ಲಾಪುರ, ಪೂಜಾರ್ ಚಂದ್ರಪ್ಪ, ಕೊಟ್ರೇಶಪ್ಪ, ಕೆ.ಬಿ. ಷಣ್ಮುಖಪ್ಪ, ಕೆ. ಕೊಟ್ರಯ್ಯ, ಗೋಪಾಲ ಗೋಂದಲಿ, ನರೇಂದ್ರ ಗೋರಪ್ಪ ಸೇರಿದಂತೆ ಕಲಾವಿದರು ಇದ್ದರು.

# ಮೈಲಾರದಲ್ಲಿ ಮೈನವಿರೇಳಿಸಿದ ಶಸ್ತ್ರ ಪವಾಡ



ಹೂವಿನಹಡಗಲಿ, ಫೆ.20- ಮಲ್ಲಿಗೆ ನಾಡು ಹೂವಿನಹಡಗಲಿ ತಾಲ್ಲೂಕಿನ ಮೈಲಾರದಲ್ಲಿ ನಡೆದ ಜಾತ್ರಾ ಮಹೋತ್ಸವದ ಅಂಗವಾಗಿ ಜರುಗಿದ ಕಾರಣಿಕೋತ್ಸವದ ಮರುದಿನ ಸಂಜೆ ಗಂಗಿಮಾಳಮ್ಮ ದೇವಸ್ಥಾನದ ಆವರಣದಲ್ಲಿ ಕಂಚಾವೀರರು ಮೈನವಿರೇಳಿಸುವ ವಿವಿಧ ಪವಾಡಗಳನ್ನು ಪ್ರದರ್ಶಿಸಿದರು. ಈ ಪವಾಡಗಳ ಪೈಕಿ ಸರಪಳಿ ಹರಿಯುವುದು ಮತ್ತು ಕಾಲಿಗೆ ಶಸ್ತ್ರ ಚುಚ್ಚಿಕೊಳ್ಳುವುದು ಮೊದಲಾದ ಪವಾಡಗಳು ಹೆಚ್ಚು ಭಯಾನಕ ಹಾಗೂ ಚಕಿತಗೊಳಿಸಿದವು.

ಸಂಜೆ ದೇವಸ್ಥಾನದ ವಂಶಪಾರಂಪರ್ಯ ಧರ್ಮಕರ್ತರಾದ ಶ್ರೀ ಗುರು ವೆಂಕಪ್ಪಯ್ಯ ಒಡೆಯರ್ ಇವರ ಆಶೀರ್ವಾದದ ನಂತರ ಕಂಚಾವೀರರು ತಮ್ಮ ಪವಾಡ ಪ್ರದರ್ಶನಕ್ಕೆ ಮುಂದಾದರು. ಕಬ್ಬಿಣದ ಸಲಾಕೆಯನ್ನು ಕಾಲಿಗೆ ಚುಚ್ಚಿಕೊಳ್ಳುವುದು. ಬಲವಾದ ಕಬ್ಬಿಣದ ಸರಪಳಿಗಳನ್ನು ತುಂಡು ಮಾಡುವುದು ಮತ್ತು ಕಂಚಾವೀರರು ಆರ್ಭಟಿಸುವುದು. ಅರಚುವುದು ನೋಡಿದ ಮಕ್ಕಳು, ಮಹಿಳೆಯರು ಭಯಭೀತರಾಗಿದ್ದು, ಕಂಡುಬಂದಿತು.

ವಂಶಪಾರಂಪರಿಕವಾಗಿ ಕಂಚಾವೀರರು ಸೇವೆಯ ರೂಪದಲ್ಲಿ ಶ್ರೀ ಮೈಲಾರಲಿಂಗ ಸ್ವಾಮಿಯ ಚಾಕರಿಯ ಮಾಡುತ್ತಾ ಬರುತಿರುವುದಾಗಿ ಕಂಚಾವೀರರು ತಿಳಿಸಿದರು. ಸೂಕ್ತ ಪೊಲೀಸರು ಬಂದೋಬಸ್ತ್ ಏರ್ಪಡಿಸಲಾಗಿತ್ತು.

# ಭದ್ರಾ ಮೇಲ್ದಂಡೆ, ರಾಷ್ಟ್ರೀಯ ಮಾನ್ಯತೆ




ಜಗಳೂರು, ಫೆ.20- ಭದ್ರಾ ಮೇಲ್ದಂಡೆ ಯೋಜನೆಯನ್ನು ರಾಷ್ಟ್ರೀಯ ಯೋಜನೆಯನ್ನಾಗಿ ಕೇಂದ್ರ ಸರ್ಕಾರದ ಹೈಪವರ್ ಸಮಿತಿ ಅನುಮೋದನೆ ನೀಡಿದ ಹಿನ್ನೆಲೆಯಲ್ಲಿ ಶಾಸಕರು ಹಾಗೂ ಬಿಜೆಪಿ ಕಾರ್ಯಕರ್ತರು ಪಟ್ಟಣದ ಮಹಾತ್ಮ ಗಾಂಧಿ ವೃತ್ತದಲ್ಲಿ ಪಟಾಕಿ ಸಿಡಿಸಿ ಸಂಭ್ರಮಿಸಿದರು.

ನಂತರ ಮಾತನಾಡಿದ ಶಾಸಕ ಎಸ್.ವಿ. ರಾಮಚಂದ್ರ, ಭದ್ರಾ ಮೇಲ್ದಂಡೆ ಯೋಜನೆಗೆ 1336 ಕೋಟಿ ಅನುದಾನದಲ್ಲಿ ಶೇ. 75 ಕೇಂದ್ರ ಜಲ ನಿಗಮದಿಂದ ನೀಡುತ್ತದೆ. ಶೇ.25 ರಾಜ್ಯಸರ್ಕಾರ ಬಿಡುಗಡೆಗೊಳಿಸಿ, ರಾಷ್ಟ್ರೀಯ ಯೋಜನೆಯನ್ನಾಗಿ ಅನುಮೋದನೆ ನೀಡಿದೆ. ಕನಸಿನ ಮಹತ್ತರ ಯೋಜನೆ ನಮ್ಮದೇ ರಾಜ್ಯ ಸರ್ಕಾರ ಹಾಗೂ ಸಂಸದ ಜಿ.ಎಂ ಸಿದ್ದೇಶ್ವರ ಅವರ ಶ್ರಮದಿಂದ ಸಾಕಾರಗೊಂಡಿದೆ ಎಂದರು.

ನಿರಂತರ ಪರಿಶ್ರಮ ನಡೆಸಿದ ಭದ್ರಾ ಮೇಲ್ದಂಡೆ ಹೋರಾಟ ಸಮಿತಿ ಅಧ್ಯಕ್ಷ ತೋರಣಗಟ್ಟೆ ತಿಪ್ಪೇಸ್ವಾಮಿ ಅವರ ನೇತೃತ್ವದ ವಿವಿಧ ಸಂಘ-ಸಂಸ್ಥೆಗಳ ಮುಖಂಡರುಗಳಿಗೆ ಅಭಿನಂದಿಸುತ್ತೇನೆ ಎಂದರು.

ಸಂಸದ ಸಿದ್ದೇಶ್ವರ ಪುತ್ರ ಜಿ.ಎಸ್.ಅನಿತ್ ಮಾತನಾಡಿ, ನನ್ನ ತಂದೆ ಅವರ ಜೊತೆಗೂಡಿ ಇಚ್ಛಾಶಕ್ತಿಯಿಂದ ಶಾಸಕ ಎಸ್.ವಿ.ರಾಮಚಂದ್ರ ಅವರು ಭದ್ರಾ ಮೇಲ್ದಂಡೆ ಹಾಗೂ ನೀರಾವರಿ ಕಡತಗಳ ಮಂಜೂರಾತಿಗೆ ಬೆನ್ನತ್ತಿದ ಹೋರಾಡಿದ ಫಲವಾಗಿ ಯೋಜನೆಗಳು ಸಾಕಾರಗೊಂಡು ತಾಲ್ಲೂಕಿಗೆ ಶೀಘ್ರ ನೀರು ಹರಿಯಲಿದೆ. ಇದರಿಂದ ರೈತರ ಸಂಕಷ್ಟ ದೂರವಾಗಿ ಸಮೃದ್ಧಿ ಜೀವನ ಸಾಗಿಸಲು ಅನುಕೂಲವಾಗಲಿದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಶಾಸಕರ ಪತ್ನಿ ಇಂದಿರಾ ರಾಮಚಂದ್ರ, ಪುತ್ರ ಅಜಯೇಂದ್ರ ಸಿಂಹ, ಬಿಜೆಪಿ ಮಂಡಲ ಅಧ್ಯಕ್ಷ ಎಚ್.ಸಿ.ಮಹೇಶ್, ಡಿಸಿಸಿ ಬ್ಯಾಂಕ್ ಅಧ್ಯಕ್ಷ ವೇಣುಗೋಪಾಲ ರೆಡ್ಡಿ, ವಿಎಸ್‌ಎಸ್‌ಎನ್ ಅಧ್ಯಕ್ಷ ಬಿಸ್ತುವಳ್ಳಿ ಬಾಬು, ಪ.ಪಂ ಅಧ್ಯಕ್ಷ ಸಿದ್ದಪ್ಪ, ಉಪಾಧ್ಯಕ್ಷೆ ಮಂಜಮ್ಮ, ಮುಖಂಡರಾದ ಜೆ.ವಿ.ನಾಗರಾಜ್, ಮಲ್ಲೇಶ್, ಶಿವಕುಮಾರ್, ವಕೀಲ ಹನುಮಂತಪ್ಪ ಮತ್ತಿತರರು ಭಾಗವಹಿಸಿದ್ದರು.

ಕರ್ನಾಟಕ ಸರ್ಕಾರ
ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿ ಇಲಾಖೆ.
ಜಿಲ್ಲಾಡಳಿತ, ವಿಜಯನಗರ
। ಶ್ರೀ ಗುರು ಕೊಟ್ಟೂರೇಶ್ವರ ಪ್ರಸನ್ನ ।
ವಿಜಯನಗರ ಜಿ॥ ಕೊಟ್ಟೂರು ತಾ॥ ಶ್ರೀಕ್ಷೇತ್ರ ಕೊಟ್ಟೂರು ಪಟ್ಟಣದಲ್ಲಿ
ಶ್ರೀ ಗುರುಬಸವೇಶ್ವರ ಸ್ವಾಮಿಯ
ವಾರ್ಷಿಕ ಜಾತ್ರೆ / ರಥೋತ್ಸವ ರದ್ದು
-: ಪ್ರಕಟಣೆ :-
ಸಾರ್ವಜನಿಕ ಮತ್ತು ಭಕ್ತಾದಿಗಳ ಆರೋಗ್ಯದ ಹಿತದೃಷ್ಟಿಯಿಂದ ಕೋವಿಡ್-19 (ಕರೋನಾ ವೈರಾಣು-2022) ಹರಡದಂತೆ ತಡೆಯುವ ಕುರಿತು ಮುಂಜಾಗೃತಾ ಕ್ರಮವಾಗಿ ವಿಜಯನಗರ ಜಿಲ್ಲಾ, ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ದಂಡಾಧಿಕಾರಿಗಳು ವಿಪತ್ತು ನಿರ್ವಹಣಾ ಕಾಯ್ದೆ-2005 ಹಾಗೂ ದಂಡ ಪ್ರಕ್ರಿಯಾ ಸಂಹಿತೆ - 1973 ಕಲಂ, 144 ಅಡಿ ದಿನಾಂಕ : 24-02-2022 ರಿಂದ ದಿನಾಂಕ 25-02-2022 ರ ವರೆಗೆ ಶ್ರೀ ಗುರುಬಸವೇಶ್ವರ ಸ್ವಾಮಿಯ ವಾರ್ಷಿಕ ಜಾತ್ರೆಗೆ ಭಕ್ತಾದಿಗಳು / ಸಾರ್ವಜನಿಕರು ಪಾಲ್ಗೊಳ್ಳುವಿಕೆಯನ್ನು ನಿಷೇಧಿಸಿದೆ.
-: ವಿಶೇಷ ಸೂಚನೆ :- ದಿನಾಂಕ : 24-02-2022 ರಿಂದ ದಿನಾಂಕ 25-02-2022 ರ ವರೆಗೆ ಕೊಟ್ಟೂರು ಪಟ್ಟಣಕ್ಕೆ ಭಕ್ತಾದಿಗಳು, ಸಾರ್ವಜನಿಕರಿಗೆ ಪ್ರವೇಶವಿರುವುದಿಲ್ಲ, ಕೊಟ್ಟೂರು ತೇರು ಬೀದಿ, ತೇರು ಬೀದಿ ಬಯಲು ಪ್ರದೇಶ, ಪಟ್ಟಣಾದ್ಯಂತ ಜಾತ್ರಾ ಮಳಿಗೆಗಳನ್ನು ಹಾಗೂ ನಾಟಕ ಕಂಪನಿಗಳನ್ನು ಹಾಕಲು ನಿರ್ಬಂಧವಿರುತ್ತದೆ. ಭಕ್ತಾದಿಗಳು / ಸಾರ್ವಜನಿಕರು ಸಹಕರಿಸಬೇಕೆಂದು ವಿನಂತಿಸಿದೆ.
ಪಿ. ಅನಿರುದ್ಧ್ ಶ್ರವಣ್ ಭಾ.ಆ.ಸೇ. — ಮಾನ್ಯ ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ದಂಡಾಧಿಕಾರಿಗಳು, ವಿಜಯನಗರ
ಪ್ರಕಾಶ್‌ರಾವ್ ಯಂ.ಹೆಚ್. — ಸಹಾಯಕ ಆಯುಕ್ತರು
ಸಿ.ಹೆಚ್.ಎಂ. ಗಂಗಾಧರಯ್ಯ — ಪ್ರಧಾನ ಧರ್ಮಕರ್ತರು, ಶ್ರೀ ಗುರುಬಸವೇಶ್ವರಸ್ವಾಮಿ ದೇವಸ್ಥಾನ, ಕೊಟ್ಟೂರು
ಕಾರ್ಯನಿರ್ವಾಹಕ ಅಧಿಕಾರಿಗಳು — ಶ್ರೀ ಗುರುಬಸವೇಶ್ವರಸ್ವಾಮಿ ದೇವಸ್ಥಾನ, ಕೊಟ್ಟೂರು — ಮೊ : 08391-226001
ಕೊಟ್ಟೂರು ಪೋಲೀಸ್ ಠಾಣೆ — ಮೊ : 08391-226333





# RASHTROTTHANA VIDYA KENDRA CBSE

Affiliation No: 830511, Davanagere: 577004

Ph : 08192-258255/56, Mob: 9480766501, 9964182067, Email: rvkdvgacademics@gmail.com

## 2022-23ನೇ ಸಾಲಿನ ಪ್ರಿ.ಕೆಜಿ ಯಿಂದ 8ನೇ ತರಗತಿಗಳಿಗೆ ನೋಂದಣಿ ಪ್ರಾರಂಭ



ಆನ್‌ಲೈನ್ ಮೂಲಕವೂ ನೋಂದಣಿಗಾಗಿ ಅರ್ಜಿ ಸಲ್ಲಿಸಬಹುದು.
ಅರ್ಜಿಗಾಗಿ ಆನ್‌ಲೈನ್ ಲಿಂಕ್:
http://rvkcbse.in/davangere/enquiry-form-html

Consecutively 100% Result of Class 10 Since 6 years

**Infrastucture and Facilities**
- Spacious well ventilated class rooms
- Well Stocked Library
- Well Equipped Montessori, Science, Mathematics, Language & Digital Class.
- Yoga, Dance, Music, Art & Craft
- Highly Qualified Experienced Faculty

**ಸಾಧನೆಗಳ ಮೈಲಿಗಲ್ಲು**
ರಾಷ್ಟ್ರಮಟ್ಟದ ಹೆರಿಟೇಜ್ ಕ್ವಿಜ್‌ನಲ್ಲಿ 4ನೇ ಸ್ಥಾನ -2019
ಇಲ್ಲಿಯವರೆಗೆ ಸುಮಾರು 50ಕ್ಕೂ ಹೆಚ್ಚು 'ಇನ್ಸ್ಪೈರ್ ಅವಾರ್ಡ್'ಗಳು ಬಂದಿವೆ.
ನಿಧಿ ವಿ. ನವನಿ: ಜಿಲ್ಲಾ ಯುವ ವಿಜ್ಞಾನಿ 2016
ದೇವ್.ಆರ್: ಜಿಲ್ಲಾ ಯುವ ವಿಜ್ಞಾನಿ 2017
ಪ್ರಥಮ್ ಕೆ.ಎಂ: ರಾಜ್ಯ ಯುವ ವಿಜ್ಞಾನಿ 2018
ಅಭಿಜ್ಞಾ ತನ್ವಿ. ಡಿ: ಜಿಲ್ಲಾ ಯುವ ವಿಜ್ಞಾನಿ 2019

Limited Seats Available

## Walk-In Interview
On 26-02-2022, Saturday. 9:00 am to 2:00pm

Applications are invited for the post of teaching staff for the above institution for the academic year 2022-23

| Designation | | Nursery | Primary | Secondary |
|---|---|---|---|---|
| Academic Co-ordinator | | 02 | 01 | 01 |
| Teacher | Kannada | 00 | 05 | 03 |
| | English | 06 | 05 | 03 |
| | Hindi | 00 | 04 | 02 |
| | Mathematics | 00 | 03 | 03 |
| | Science | 02 | 05 | 03 |
| | Social | 00 | 03 | 04 |
| | Physics | 00 | 00 | 01 |
| | Sanskrit | 00 | 01 | 01 |
| | Computer Science | 00 | 00 | 01 |
| | Physical Educartion | 00 | 04 | 01 |
| Librarian | | 00 | 00 | 01 |
| Performing Arts | Drawing | 00 | 01 | 01 |
| | Vocal | 00 | 01 | 00 |
| | Tabala | 00 | 01 | 00 |
| | Keyboard | 00 | 01 | 00 |
| | Classical Dance | 00 | 01 | 00 |

- Preference will be given graduates & experienced female teachers who are creative in technology aided teaching.
- BE Graduates are also Preferred.
- Remuneration is not constraint for deserving candidate's with PF & ESI facility.

School is Seeking canidates, those who are (Gradutes under Engineering , MBA, MCA, M.Com, BBM, BCA, B.Com) interested to become Educators. The aspirants can contact school with a Resume.

An another Unit

**RASHTROTTHANA GOKULAM**

SS Hi-Tech Hospital Road, Lakshmi Layout, Near Saibaba Mandir, Davanagere-57705.

Contac No: 7760617929, 886136963, E-Mail: gokulamrvk@gmail.com

Registration Open

For the Grades Pre-Kg, LKG & UKG 2022-23



Scan QR Code for Campus Viiew




For More Details Contact: Ph: 08192-258255 / 56, M: 9480766501, 9964182067


JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte